# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಸೋಮವಾರ, ನವೆಂಬರ್ 22, 2021

ಸಂಪುಟ : 48 ಸಂಚಿಕೆ : 191 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 4 ರೂ : 4.00 www.janathavani.com janathavani@mac.com


# ಕನಿಷ್ಠ ಬೆಂಬಲ ಬೆಲೆಯತ್ತ ರೈತರ ಚಿತ್ತ

## ಕೃಷಿ ಕಾಯ್ದೆ ವಾಪಸಾತಿ ನಂತರ ಬದಲಾದ ರೈತ ಸಂಘಟನೆಗಳ ಹೋರಾಟದ ದಿಕ್ಕು

ಮುಜಾಫರನಗರ, ನ. 21 -ಭಾರತೀಯ ಕಿಸಾನ್ ಯೂನಿಯನ್ (ಬಿ.ಕೆ.ಯು.) ಕೇಂದ್ರ ಕಚೇರಿ ಇರುವ ಉತ್ತರ ಪ್ರದೇಶದ ಮುಜಾಫರ ನಗರದಲ್ಲಿ ಕನಿಷ್ಠ ಬೆಂಬಲ ಬೆಲೆಗೆ ಶಾಸನಾತ್ಮಕ ಬೆಂಬಲ ಪಡೆಯುವ ಕುರಿತು ಹೆಚ್ಚಿನ ಉತ್ಸಾಹ ಕಂಡು ಬರುತ್ತಿದೆ.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಮೂರು ಕೃಷಿ ಕಾಯ್ದೆಗಳನ್ನು ವಾಪಸ್ ಪಡೆಯುವುದಾಗಿ ಹೇಳಿದ ನಂತರ, ಕನಿಷ್ಠ ಬೆಂಬಲ ಬೆಲೆಯ ಕುರಿತು ರೈತರ ಕಣ್ಣು ನೆಟ್ಟಿವೆ.

ಬಿ.ಕೆ.ಯು. ಅಧ್ಯಕ್ಷ ನರೇಶ್ ಟಿಕಾಯತ್ ಹಾಗೂ ಅವರ ಸಹೋದರರಾದ ಒಕ್ಕೂಟದ ವಕ್ತಾರ ರಾಕೇಶ್ ಟಿಕಾಯತ್ ಅವರು ಮುಜಾಫರ ನಗರದ ಸಿಸೌಲಿ ಹಳ್ಳಿಯಲ್ಲಿದ್ದಾರೆ. ರೈತರ ಒತ್ತಡದ ಕಾರಣದಿಂದಾಗಿಯೇ ಸರ್ಕಾರ ಮಸೂದೆಗಳನ್ನು ವಾಪಸ್ ಪಡೆದಿದೆ. ಮುಂಬರುವ ಚುನಾವಣೆಗಳ ಹಿನ್ನೆಲೆಯಲ್ಲಿ ಸರ್ಕಾರ ಈ ನಿರ್ಧಾರ ತೆಗೆದುಕೊಂಡಿದೆ ಎಂದು ಸ್ಥಳೀಯ ಬಿ.ಕೆ.ಯು. ಸದಸ್ಯ ಮಂಗರಾಮ್ ಬಲ್ಯಾನ್ ಹೇಳಿದ್ದಾರೆ.

ಕಾನೂನು ವಾಪಸ್ ಪಡೆಯುವ ಮಾತ್ರದಿಂದ ರೈತರಿಗೆ ನೆರವಾಗದು. ಸರ್ಕಾರ ಕನಿಷ್ಠ ಬೆಂಬಲ ಬೆಲೆಗೆ ಶಾಸನಾತ್ಮಕ ಗ್ಯಾರಂಟಿ ನೀಡಬೇಕು, ರಸಗೊಬ್ಬರಗಳು ಲಭ್ಯವಾಗುವಂತೆ ಮಾಡಬೇಕು ಮತ್ತು ಕೃಷಿಗೆ ಅಗತ್ಯವಾದ ಇತರೆ ವಿಷಯಗಳನ್ನು ಬಗೆಹರಿಸಬೇಕು ಎಂದು ಬಲ್ಯಾನ್ ಹೇಳಿದ್ದಾರೆ.

ರೈತರ ಪ್ರತಿಭಟನೆಗಳಿಂದಾಗಿ ಜಾಟ್ ಸಮುದಾಯ ಬಿಜೆಪಿಗೆ ವಿರುದ್ಧವಾಗಿ ಒಂದಾಗಿದೆ. ಬಿಜೆಪಿ ನಾಯಕರು ಹಳ್ಳಿಗಳಿಗೆ ಬರದಂತೆ ರೈತರು ನಿಷೇಧಿಸಿದ್ದಾರೆ ಎಂದವರು ತಿಳಿಸಿದ್ದಾರೆ.

ಸಾವು ಹಾಗೂ ಶ್ರದ್ಧಾಂಜಲಿ ಸಭೆಗಳಿಗೆ ಸ್ವಯಂ ಪ್ರೇರಿತವಾಗಿ ಬರಬಹುದು. ಉಳಿದಂತೆ ಹಳ್ಳಿಗಳಿಗೆ ಬರದಂತೆ ವರ್ಷದಿಂದ ಬಿಜೆಪಿ ನಾಯಕರ ಮೇಲೆ ನಿಷೇಧ ಹೇರಲಾಗಿದೆ ಎಂದವರು ತಿಳಿಸಿದ್ದಾರೆ.

ಬಿಜೆಪಿ ಹೊರಗಿನ ಸಂಘಟನೆಗೆ ತಲೆಬಾಗಿದೆ ಎಂಬುದನ್ನು ಕಾನೂನುಗಳನ್ನು ವಾಪಸ್ ಪಡೆಯುತ್ತಿರುವುದು ತೋರಿಸುತ್ತಿದೆ. 2014ರ ನಂತರ ಈ ರೀತಿ ಆಗಿರುವುದು ಅಪರೂಪ ಎಂದು ಪ್ರತಿಪಕ್ಷವಾದ ಆರ್.ಎಲ್.ಡಿ. ಹೇಳಿದೆ.

ಕಾಯ್ದೆಗಳನ್ನು ವಾಪಸ್ ಪಡೆಯುವುದರಿಂದ ಸರ್ಕಾರ ರೈತರಿಗೆ ಉಪಕಾರ ಮಾಡಿಲ್ಲ. ಪ್ರಮುಖ ಸಮಸ್ಯೆಗಳನ್ನು ಬಗೆಹರಿಸಬೇಕಿದೆ ಎಂದು ಆರ್.ಎಲ್.ಡಿ. ವಕ್ತಾರ ಸಂದೀಪ್ ಚೌಧರಿ ಹೇಳಿದ್ದಾರೆ.

ಕನಿಷ್ಠ ಬೆಂಬಲ ಬೆಲೆಯ ವಿಷಯಗಳನ್ನು ಬಗೆಹರಿಸಿದಾಗ ಹಾಗೂ ರೈತರ ಆದಾಯ ದ್ವಿಗುಣಗೊಳಿಸುವ ಭರವಸೆ ಈಡೇರಿಸಿದಾಗ ರೈತರಿಗೆ ನಿಜವಾದ ಲಾಭವಾಗುತ್ತದೆ ಎಂದು ಚೌಧರಿ ಹೇಳಿದ್ದಾರೆ.

ಮತ್ತೊಂದೆಡೆ, ಕೇಂದ್ರ ಸರ್ಕಾರ ಕಾಯ್ದೆಗಳನ್ನು ವಾಪಸ್ ಪಡೆಯುವ ಬೇಡಿಕೆಗೆ ಮಣಿಯಬಾರದಿತ್ತು ಎಂದು ಮುಜಾಫರನಗರದ ಬಿಜೆಪಿ ಬೆಂಬಲಿಗರು ಭಾವಿಸಿದ್ದಾರೆ. ಪ್ರತಿಭಟನಾಕಾರರು ಈಗ ಮತ್ತಷ್ಟು ಬೇಡಿಕೆಗಳೊಂದಿಗೆ ಬರಬಹುದು ಎಂದವರು ಹೇಳಿದ್ದಾರೆ.

ಸರ್ಕಾರ ಕಾಯ್ದೆಗಳನ್ನು ವಾಪಸ್ ಪಡೆಯಬಾರದಿತ್ತು. ಈ ಒಕ್ಕೂಟದವರು ಪ್ರತಿಭಟನೆ (3ನೇ ಪುಟಕ್ಕೆ)

# ಸ್ವಚ್ಛ ಸರ್ವೇಕ್ಷಣೆ ಸಮೀಕ್ಷೆ ದಾವಣಗೆರೆಗೆ 4ನೇ ಸ್ಥಾನ

## ಮೇಯರ್ ವೀರೇಶ್ ಹರ್ಷ, ಮತ್ತಷ್ಟು ಉತ್ತಮ ಸ್ಥಾನ ಗಳಿಕೆಗೆ ಸಹಕರಿಸಲು ಕರೆ



**ಹಸಿಕಸವನ್ನು ಕಾಂಪೋಸ್ಟ್ ಗೊಬ್ಬರವನ್ನಾಗಿ ಮಾಡಿ ಬಳಸಲು, ಮದುವೆಗಳಲ್ಲಿ 'ಶೂನ್ಯ ತ್ಯಾಜ್ಯ' ಪರಿಕಲ್ಪನೆಗೆ ಮುಂದಾಗಲು ಮೇಯರ್ ವೀರೇಶ್ ಸಲಹೆ**

ದಾವಣಗೆರೆ, ನ.21- ಕೇಂದ್ರ ಸರ್ಕಾರದಿಂದ 372 ನಗರ ಸ್ಥಳೀಯ ಸಂಸ್ಥೆಗಳಲ್ಲಿ ನಡೆದ ಸ್ವಚ್ಛ ಸರ್ವೇಕ್ಷಣೆ-2021ರ ಸಮೀಕ್ಷೆಯಲ್ಲಿ ದಾವಣಗೆರೆ ನಗರವು 118ನೇ ಸ್ಥಾನ ಹಾಗೂ ರಾಜ್ಯ ಮಟ್ಟದಲ್ಲಿ 4ನೇ ಸ್ಥಾನ ಪಡೆದಿರುವುದಾಗಿ ಮಹಾನಗರ ಪಾಲಿಕೆ ಮೇಯರ್ ಎಸ್.ಟಿ. ವೀರೇಶ್ ಹೇಳಿದರು.

ಪಾಲಿಕೆ ಸಭಾಂಗಣದಲ್ಲಿಂದು ಪತ್ರಿಕಾ ಗೋಷ್ಠಿ ನಡೆಸಿ ಮಾಹಿತಿ ನೀಡಿದ ಅವರು, 2020ರ ಸಮೀಕ್ಷೆಯಲ್ಲಿ ದಾವಣಗೆರೆ 364ನೇ ಸ್ಥಾನದಲ್ಲಿ ಹಾಗೂ ರಾಜ್ಯಮಟ್ಟದಲ್ಲಿ 21ನೇ ಸ್ಥಾನದಲ್ಲಿತ್ತು ಎಂದು ಹೇಳಿದರು.

ಸಮೀಕ್ಷೆಯಲ್ಲಿ ನಗರವು ರ್‍ಯಾಂಕಿಂಗ್‌ನಲ್ಲಿ ಉತ್ತಮ ಸ್ಥಾನ ಪಡೆದಿರುವುದಕ್ಕೆ ಹರ್ಷ ವ್ಯಕ್ತಪಡಿಸಿರುವ ಮೇಯರ್, ನಗರದಾದ್ಯಂತ 2021ರ ಜನವರಿಯಿಂದ ಮಾರ್ಚ್ ತಿಂಗಳವರೆಗೆ ಸಮೀಕ್ಷೆ (2ನೇ ಪುಟಕ್ಕೆ)

**ಕಟ್ಟಡ ತ್ಯಾಜ್ಯವನ್ನು ಎಲ್ಲೆಂದರಲ್ಲಿ ಹಾಕುವ ಬದಲು ಆವರಗೊಳ್ಳದ ಬಳಿ ಇರುವ ಘನ ತ್ಯಾಜ್ಯ ಘಟಕದ ಪಕ್ಕದಲ್ಲಿನ ಖಾಲಿ ಜಾಗದಲ್ಲಿ ವಿಲೇವಾರಿ ಮಾಡುವ ಮೂಲಕ ನಗರದ ಸ್ವಚ್ಛತೆಗೆ ಸಹಕರಿಸಬೇಕು ಎಂದು ಪಾಲಿಕೆ ಆಯುಕ್ತ ವಿಶ್ವನಾಥ್ ಮುದಜ್ಜಿ ಸಾರ್ವಜನಿಕರಲ್ಲಿ ಮನವಿ ಮಾಡಿದರು.**

# ಲಸಿಕೆ ಪಡೆದವರಿಗೆ ಬಹುಮಾನ

## ಲಸಿಕೆಗೆ ಉತ್ತೇಜನ ನೀಡಲು ಲಾಟರಿ ಯೋಜನೆ

ನವದೆಹಲಿ, ನ. 21 – ಜನರು ಮೊದಲ ಹಾಗೂ ಎರಡನೇ ಡೋಸ್ ಲಸಿಕೆ ಪಡೆಯಲು ಉತ್ತೇಜನ ನೀಡುವ ಸಲುವಾಗಿ, ಲಸಿಕೆ ಪಡೆದವರಿಗಾಗಿ ಲಾಟರಿ ಬಹುಮಾನ ನೀಡುವ ಯೋಜನೆಗೆ ಕೇಂದ್ರ ಸರ್ಕಾರ ಪರಿಶೀಲಿಸುತ್ತಿದೆ ಎಂದು ಮೂಲಗಳು ತಿಳಿಸಿವೆ.

ಇದರ ಜೊತೆಗೆ, ಕೆಲಸದ ಸ್ಥಳಗಳಲ್ಲಿ ಲಸಿಕೆ ನೀಡಲು ಮತ್ತು ಪೂರ್ಣ ಲಸಿಕೆ ಪಡೆದ ಉದ್ಯೋಗಿಗಳಿಗೆ ಬ್ಯಾಡ್ಜ್ ನೀಡಲು ಕೇಂದ್ರ ಆರೋಗ್ಯ ಸಚಿವಾಲಯ ಯೋಜಿಸಿದೆ.

ರಾಜ್ಯಗಳು ಈ ಬಗ್ಗೆ ಕ್ರಮಗಳನ್ನು ತೆಗೆದುಕೊಳ್ಳುವಂತೆ ಶೀಘ್ರದಲ್ಲೇ ಸೂಚನೆ ನೀಡುವ ಸಾಧ್ಯತೆ ಇದೆ.

ಜಿಲ್ಲೆ ಹಾಗೂ ಗ್ರಾಮಗಳಲ್ಲಿ ಲಸಿಕೆ ಪಡೆದ ಪ್ರಭಾವಿಗಳ ಮೂಲಕ ಇತರರು ಲಸಿಕೆ ಪಡೆಯುವಂತೆ ಉತ್ತೇಜನ ನೀಡಲಾಗುವುದು.

ಇಂಥವರನ್ನು ಲಸಿಕಾ ರಾಯಭಾರಿಗಳಾಗಿ ನೇಮಿಸಲು ಮತ್ತು ಮನೆ ಮನೆಗೆ ತೆರಳಿ ಲಸಿಕೆ ನೀಡುವ ಯೋಜನೆಯಲ್ಲಿ ತೊಡಗಿಸಿಕೊಳ್ಳಲು ಯೋಜಿಸಲಾಗಿದೆ. ಎರಡು ಡೋಸ್ ಲಸಿಕೆ ಪಡೆಯುವ ಬಗ್ಗೆ ಇವರ ಮೂಲಕ ಜನರಿಗೆ ಸೂಕ್ತ ಸಲಹೆ ನೀಡಲು ನಿರ್ಧರಿಸಲಾಗಿದೆ.

ಮೊದಲ ಡೋಸ್ ನಂತರ ಎರಡನೇ ಡೋಸ್ ಲಸಿಕೆ ಪಡೆಯದವರಿಗೆ ಮನೆ ಮನೆಗೆ ತೆರಳಿ ಲಸಿಕೆ ನೀಡಲು ತಿಂಗಳ ಕಾಲದ ಯೋಜನೆ ರೂಪಿಸಲಾಗಿದೆ.

ಪ್ರತಿ ವಾರ ಇಲ್ಲವೇ ತಿಂಗಳಿಗೆ ಅದೃಷ್ಟದ ಲಾಟರಿ ಮೂಲಕ ಪೂರ್ಣ ಲಸಿಕೆ ಪಡೆದವರಿಗೆ ಬಹುಮಾನ ನೀಡಲು ಉದ್ದೇಶಿಸಲಾಗಿದೆ. ಗೃಹ ಉಪಕರಣಗಳು, ಪಡಿತರ, (3ನೇ ಪುಟಕ್ಕೆ)

# ಕೃಷಿ ಕಾಯ್ದೆಗಳ ವಾಪಸಾತಿಗೆ ನಾಡಿದ್ದು ಒಪ್ಪಿಗೆ ?

ನವದೆಹಲಿ, ನ. 21 – ಮೂರು ಕೃಷಿ ಕಾಯ್ದೆಗಳನ್ನು ವಾಪಸ್ ಪಡೆಯುವ ಮಸೂದೆಗೆ ಕೇಂದ್ರ ಸಂಪುಟ ಬುಧವಾರದಂದು ಅನುಮೋದನೆ ನೀಡುವ ಸಾಧ್ಯತೆ ಇದೆ ಎಂದು ಸರ್ಕಾರದ ಮೂಲಗಳು ತಿಳಿಸಿವೆ. ಮಸೂದೆಯನ್ನು ಮುಂಬರುವ ಸಂಸತ್ ಅಧಿವೇಶನದಲ್ಲಿ ಮಂಡಿಸಲಾಗುವುದು ಎಂದೂ ಮೂಲಗಳು ತಿಳಿಸಿವೆ.

ಕೆಲ ರೈತ ಸಂಘಟನೆಗಳು ವಿರೋಧಿಸುತ್ತಿರುವ ಮಸೂದೆಗಳನ್ನು ವಾಪಸ್ ಪಡೆಯುವುದಾಗಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಶುಕ್ರವಾರ ಘೋಷಿಸಿದ್ದರು. ಸಂಸತ್ತಿನ ಚಳಿಗಾಲದ ಅಧಿವೇಶನ ನವೆಂಬರ್ 29ರಿಂದ ಆರಂಭವಾಗಲಿದೆ.

# ಜಿಲ್ಲಾ ಕಸಾಪ ಅಧ್ಯಕ್ಷರಾಗಿ ಬಿ.ವಾಮದೇವಪ್ಪ ಆಯ್ಕೆ

## ಪ್ರತಿ ಸ್ಪರ್ಧಿ ಶಿವಕುಮಾರಸ್ವಾಮಿ ಕುರ್ಕಿ ವಿರುದ್ಧ 3026 ಮತಗಳ ಅಂತರದಿಂದ ಗೆಲುವು



ದಾವಣಗೆರೆ, ನ.21- ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ನ ಅಧ್ಯಕ್ಷ ಸ್ಥಾನಕ್ಕೆ ಇಂದು ಚುನಾವಣೆ ನಡೆದು ಬಿ. ವಾಮದೇವಪ್ಪ ಗೆಲುವಿನ ನಗೆ ಬೀರಿದರು.

ತಮ್ಮ ಪ್ರತಿಸ್ಪರ್ಧಿ ಶಿವಕುಮಾರ ಸ್ವಾಮಿ ಕುರ್ಕಿ ವಿರುದ್ಧ ಬಿ. ವಾಮದೇವಪ್ಪ 3026 ಅಂತರದಿಂದ ಜಯ ಗಳಿಸಿದ್ದಾರೆ. ಬಿ. ವಾಮದೇವಪ್ಪ ಅವರು 3920 ಮತಗಳನ್ನು ಪಡೆದಿದ್ದು, ಶಿವಕುಮಾರಸ್ವಾಮಿ ಕುರ್ಕಿ 894 ಮತಗಳನ್ನು ಪಡೆದು ಸೋಲು ಕಂಡಿದ್ದಾರೆ.

ದಾವಣಗೆರೆ ತಾಲ್ಲೂಕಿನ ಆರು ಮತಗಟ್ಟೆಗಳಲ್ಲಿ ನಡೆದ ಮತದಾನದಲ್ಲಿ 1993 ಮತಗಳನ್ನು ವಾಮದೇವಪ್ಪ ಪಡೆದಿದ್ದಾರೆ. ಪ್ರತಿ ಸ್ಪರ್ಧಿ ಶಿವಕುಮಾರ ಸ್ವಾಮಿ ಕುರ್ಕಿ 320 ಮತಗಳನ್ನು ಪಡೆದಿದ್ದಾರೆ.

ವಾಮದೇವಪ್ಪ ಅವರು ಕಸಾಪ ಜಿಲ್ಲಾಧ್ಯಕ್ಷರಾಗಿ ಗೆಲುವು ಸಾಧಿಸುತ್ತಿದ್ದಂತೆ ಅಭಿಮಾನಿಗಳು, ಬೆಂಬಲಿಗರು ವಿಜಯೋತ್ಸವ ಆಚರಿಸಿದರು.

**ಶೇ.45.50ರಷ್ಟು ಮತದಾನ:** ಕನ್ನಡ ಸಾಹಿತ್ಯ ಪರಿಷತ್‌ನ ಜಿಲ್ಲಾ ಮತ್ತು ರಾಜ್ಯಾಧ್ಯಕ್ಷ ಸ್ಥಾನಗಳಿಗೆ ಜಿಲ್ಲೆಯಲ್ಲಿ ಇಂದು 15 ಮತಗಟ್ಟೆಗಳಲ್ಲಿ ಶಾಂತಿಯುತ ಮತದಾನ ನಡೆಯಿತು. ಜಿಲ್ಲಾ ಕಸಾಪದಲ್ಲಿ 10,850 ಮತದಾರರಿದ್ದು, 4934 ಜನರು ಮತ ಚಲಾಯಿಸಿದ್ದರು. ಶೇ.45.50ರಷ್ಟು ಮತದಾನ ಆಗಿತ್ತು. 120 ತಿರಸ್ಕೃತ ಮತಗಳಾಗಿವೆ.

ಚುನಾವಣಾಧಿಕಾರಿಯೂ ಆಗಿರುವ ತಹಶೀಲ್ದಾರ್ ಬಿ.ಎನ್. ಗಿರೀಶ್ ಅವರು ಫಲಿತಾಂಶದ ಮಾಹಿತಿ ನೀಡಿದರು.

ನಗರದ ಬಾಲಕರ ಸರ್ಕಾರಿ ಪ್ರೌಢಶಾಲಾ ಮೈದಾನದಲ್ಲಿರುವ ಶಾಲೆಯ ಐದು ಮತಗಟ್ಟೆಗಳಲ್ಲಿ ಮತ್ತು ಲೋಕಿಕೆರೆಯ ಮಾರುತಿ ಸರ್ಕಾರಿ ಪ್ರೌಢಶಾಲೆ, ಹರಿಹರ ತಾಲ್ಲೂಕಿನ ಮಲೇಬೆನ್ನೂರಿನ ಸರ್ಕಾರಿ ಪದವಿಪೂರ್ವ ಕಾಲೇಜು, ಹರಿಹರದ ಗಾಂಧಿ ಮೈದಾನದಲ್ಲಿರುವ ಸರ್ಕಾರಿ ಬಾಲಕಿಯರ ಪ್ರೌಢಶಾಲೆ. ಚನ್ನಗಿರಿಯ ತಾಲ್ಲೂಕು ಕಚೇರಿ, ಸಂತೆಬೆನ್ನೂರಿನ ನಾಡ ಕಚೇರಿ ಮತ್ತು ಬಸವಾಪಟ್ಟಣದ ನಾಡ ಕಚೇರಿ, ಹೊನ್ನಾಳಿಯ (2ನೇ ಪುಟಕ್ಕೆ)

# ಕೊರೊನಾ ಲಸಿಕೆ ಪೂರೈಕೆ ಹೆಚ್ಚಳ ಸಂಗ್ರಹಕ್ಕೂ ಜಾಗವಿಲ್ಲ

**ಎಸ್.ಐ.ಐ. 50 ಲಕ್ಷ ಡೋಸ್ ಲಸಿಕೆ ರಫ್ತಿಗೆ ಅನುಮತಿ**

**ಕಂಪನಿ ಬಳಿ ಪ್ರಸಕ್ತ 25 ಕೋಟಿ ಡೋಸ್‌ಗಳ ಲಸಿಕೆ ಸಂಗ್ರಹ**

ನವದೆಹಲಿ, ನ. 21 – ಈ ವರ್ಷದ ಆರಂಭದಲ್ಲಿ ಕೊರೊನಾ ಲಸಿಕೆ ನೀಡುವುದನ್ನು ಆರಂಭಿಸಿದಾಗ ಕೊರತೆ ಹೆಚ್ಚಾಗಿದ್ದರೆ, ವರ್ಷಾಂತ್ಯದ ವೇಳೆಗೆ ಲಸಿಕೆ ಪೂರೈಕೆ ಹೆಚ್ಚಾಗಿ ಸಂಗ್ರಹಿಸುವ ಸಮಸ್ಯೆ ಉದ್ಭವಿಸಿದೆ.

ಕೊರೊನಾ ಲಸಿಕೆಯ ಉತ್ಪಾದನೆ ಹಾಗೂ ಸಂಗ್ರಹಕ್ಕೆ ಸಮಸ್ಯೆಯಾಗಿರುವುದರಿಂದ ತ್ವರಿತವಾಗಿ ಲಸಿಕೆಗಳ ಪೂರೈಕೆಗೆ ವ್ಯವಸ್ಥೆ ಮಾಡುವಂತೆ ಕೇಂದ್ರ ಸರ್ಕಾರಕ್ಕೆ ಲಸಿಕೆಉತ್ಪಾದಿಸುವ ಸೀರಮ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ (ಎಸ್.ಐ.ಐ.) ಮನವಿ ಸಲ್ಲಿಸಿದೆ.

ಕೇಂದ್ರ ಆರೋಗ್ಯ ಸಚಿವಾಲಯಕ್ಕೆ ಪತ್ರ ಬರೆದಿರುವ ಎಸ್.ಐ.ಐ.ನ ಸರ್ಕಾರಿ ಹಾಗೂ ನಿಯಂತ್ರಣ ವ್ಯವಹಾರಗಳ ನಿರ್ದೇಶಕ ಪ್ರಕಾಶ್ ಕುಮಾರ್ ಸಿಂಗ್, ಪ್ರಸಕ್ತ 24,89,15,000 ಕೋವಿಶೀಲ್ಡ್‌ಗಳ ಸಂಗ್ರಹ ಇದೆ. ಪ್ರತಿದಿನ ಸಂಗ್ರಹದ ಪ್ರಮಾಣ ಹೆಚ್ಚಾಗುತ್ತಿದೆ ಎಂದಿದ್ದಾರೆ.

ಕೋವಿಶೀಲ್ಡ್ ಅಷ್ಟೇ ಅಲ್ಲದೇ ಹಲವಾರು ದೇಶಗಳಿಗೆ ಹಾಗೂ (3ನೇ ಪುಟಕ್ಕೆ)

# ಹಾವೇರಿ ಕಸಾಪ ಅಧ್ಯಕ್ಷರಾಗಿ ಲಿಂಗಯ್ಯ



ರಾಣೇಬೆನ್ನೂರು, ನ.21- ಇಂದು ನಡೆದ ಕನ್ನಡ ಸಾಹಿತ್ಯ ಪರಿಷತ್ ಚುನಾವಣೆಯಲ್ಲಿ ಹಾವೇರಿ ಜಿಲ್ಲಾಧ್ಯಕ್ಷರಾಗಿ ತಮ್ಮ ಸಮೀಪ ಸ್ಪರ್ಧಿ ಮಾರುತಿ ಶಿಡ್ಲಾಪುರ ಇವರಿಗಿಂತ 1,452 ಹೆಚ್ಚು ಮತಗಳನ್ನು ಪಡೆದು ನಿಕಟಪೂರ್ವ ಅಧ್ಯಕ್ಷ ಲಿಂಗಯ್ಯ ಬಿ. ಹಿರೇಮಠ ಅವರು ಜಯ ಗಳಿಸಿದ್ದಾರೆ. ನಂತರದ ಸ್ಥಾನದಲ್ಲಿ ಪ್ರಭುಲಿಂಗಪ್ಪ ಹಲಗೇರಿ ಇದ್ದಾರೆ

**ಮಹೇಶ ಜೋಷಿ ಲೀಡ್ :** ರಾಜ್ಯಾಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿರುವ ಮಹೇಶ್ ಜೋಷಿ ಹಾವೇರಿ ಜಿಲ್ಲೆಯ ಎಲ್ಲ ತಾಲ್ಲೂಕುಗಳಲ್ಲೂ ಕಣದಲ್ಲಿದ್ದ 21 ಅಭ್ಯರ್ಥಿಗಳಿಗಿಂತ ಹೆಚ್ಚು ಮತ ಗಳಿಸಿದ್ದಾರೆಂದು ಗೊತ್ತಾಗಿದೆ.

# ಬಳ್ಳಾರಿ ಕಸಾಪಗೆ ಡಾ. ನಿಷ್ಠಿ ಅಧ್ಯಕ್ಷ



ಹರಪನಹಳ್ಳಿ, ನ.21- ಕನ್ನಡ ಸಾಹಿತ್ಯ ಪರಿಷತ್ ರಾಜ್ಯಾಧ್ಯಕ್ಷ, ಜಿಲ್ಲಾ ಅಧ್ಯಕ್ಷ ಹಾಗೂ ಗಡಿನಾಡು ಘಟಕಗಳ ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಬಳ್ಳಾರಿ ಹಾಗೂ ವಿಜಯನಗರ ಜಿಲ್ಲೆಗೆ ಡಾ.ನಿಷ್ಠಿ ರುದ್ರಪ್ಪ 3,978 ಮತ ಪಡೆದು 2,425 ಅತ್ಯಧಿಕ ಮತಗಳಿಂದ ಜಯಶಾಲಿಯಾಗಿದ್ದಾರೆ.

ಪಟ್ಟಣದ ಸರ್ಕಾರಿ ಜ್ಯೂನಿಯರ್ ಕಾಲೇಜ್‌ನಲ್ಲಿ ಎರಡು ಮತದಾನ ಕೇಂದ್ರಗಳಿದ್ದು, ಜಿಲ್ಲಾ ಮತ್ತು ರಾಜ್ಯ ಕನ್ನಡ ಸಾಹಿತ್ಯ ಪರಿಷತ್ ಚುನಾವಣೆಗೆ ಬೆಳಿಗ್ಗೆಯಿಂದ ಸಂಜೆ 4 ಗಂಟೆಯವರೆಗೆ ಮಂದಗತಿಯಲ್ಲಿ ಸಾಗಿತ್ತು. 826 ಮತದಾನ ನಡೆದಿದೆ. ಅದರಲ್ಲಿ 566 ಮತಗಳು ಡಾ.ನಿಷ್ಠಿ ರುದ್ರಪ್ಪ ಅವರಿಗೆ ಬಿದ್ದಿವೆ.

# ಬಾಪೂಜಿ ಸಹಕಾರಿ ಬ್ಯಾಂಕಿಗೆ 5.97 ಕೋಟಿ ರೂ. ನಿವ್ವಳ ಲಾಭ



**ಷೇರುದಾರರಿಗೆ ಶೇ.18 ಡಿವಿಡೆಂಡ್ : ಎಸ್ಸೆಸ್**

ದಾವಣಗೆರೆ,ನ.21- ಕಳೆದ ಎರಡು ವರ್ಷಗಳಲ್ಲಿ ಕೊರೊನಾ ಸಂಕಷ್ಟದಿಂದ ಎಲ್ಲ ವ್ಯವಹಾರಗಳೂ ನಷ್ಟ ಅನುಭವಿಸಿವೆ ಅಂತಹದರಲ್ಲಿಯೂ ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ 5.97 ಕೋಟಿ ರೂ ನಿವ್ವಳ ಲಾಭ ಗಳಿಸಿ ರಾಜ್ಯದಲ್ಲಿಯೇ ಅತ್ಯುತ್ತಮ ಕೆಲಸ ಮಾಡುತ್ತಿರುವ ಮುಂಚೂಣಿ ಬ್ಯಾಂಕ್ ಆಗಿದೆ ಎಂದು ಬ್ಯಾಂಕಿನ ಅಧ್ಯಕ್ಷರೂ ಹಾಗು ಶಾಸಕರಾದ ಡಾ. ಶಾಮನೂರು ಶಿವಶಂಕರಪ್ಪನವರು ಹರ್ಷ ವ್ಯಕ್ತಪಡಿಸಿದರು.

ಬಿ.ಐ.ಇ.ಟಿ ಆವರಣದಲ್ಲಿರುವ ಎಸ್.ಎಸ್. ಮಲ್ಲಿಕಾರ್ಜುನ ಸಾಂಸ್ಕೃತಿಕ ಕೇಂದ್ರದಲ್ಲಿಂದು ವರ್ಚ್ಯುಯಲ್ ಆಗಿ ಜರುಗಿದ ಬಾಪೂಜಿ ಬ್ಯಾಂಕಿನ 52ನೇ ವಾರ್ಷಿಕ ಸಾಮಾನ್ಯ ಮಹಾಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡುತ್ತಿದ್ದರು.

ಬ್ಯಾಂಕಿನ ಷೇರುದಾರರು, ನಿರ್ದೇಶಕರು ಮತ್ತು ಸಿಬ್ಬಂದಿ ವರ್ಗದವರ ಸಹಕಾರದಿಂದ ಬ್ಯಾಂಕ್ ಇಷ್ಟೊಂದು ಉನ್ನತ ಮಟ್ಟಕ್ಕೆ ಏರಲು ಸಾಧ್ಯವಾಗಿದೆ. ಕಳೆದ ವರ್ಷದಂತೆ ಈ ವರ್ಷವೂ ಬ್ಯಾಂಕಿನ ಷೇರುದಾರರಿಗೆ ಶೇ.18ರಷ್ಟು ಡಿವಿಡೆಂಡ್ ನೀಡಲು ಆಡಳಿತ ಮಂಡಳಿ ನಿರ್ಧರಿಸಿದೆ ಎಂದರು.

ಬ್ಯಾಂಕ್ ಸದಸ್ಯರ ಮರಣ ಪರಿಹಾರ ನಿಧಿ ಈಗ 10 ಸಾವಿರ ಇದ್ದು, ಅದನ್ನು ಇನ್ನೂ ಹೆಚ್ಚು ಮಾಡಿದರೆ ಬಡವರಿಗೆ ಅನುಕೂಲವಾಗುತ್ತದೆ ಎಂಬ ಇಂಗಿತವನ್ನು ಎಸ್. ಶಿವಶಂಕರಪ್ಪನವರು ವ್ಯಕ್ತಪಡಿಸಿದರು.

ಹಿರಿಯ ನಿರ್ದೇಶಕ ಡಾ. ಎಂ.ಜಿ.ಈಶ್ವರಪ್ಪನವರು, 2020-21 ಸಾಲಿನ ವಾರ್ಷಿಕ ವರದಿ ಮಂಡಿಸಿ, ಕಾರ್ಯಸೂಚಿ ದಾಖಲಿಸಿದರಲ್ಲದೇ (2ನೇ ಪುಟಕ್ಕೆ)

# ರಾಜ್ಯ ವಾಣಿಜ್ಯ - ಕೈಗಾರಿಕಾ ಸಂಸ್ಥೆ ನಿರ್ದೇಶಕರಾಗಿ ಜಂಬಗಿ ರಾಧೇಶ್



ದಾವಣಗೆರೆ, ನ. 21- ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ (ಬೆಂಗಳೂರು) ಯ ನಾಮ ನಿರ್ದೇಶಿತ ನಿರ್ದೇಶಕರಾಗಿ ನಗರದ ಹಿರಿಯ ತೆರಿಗೆ ಸಲಹೆಗಾರರಾದ ಜಂಬಗಿ ರಾಧೇಶ್ ನೇಮಕಗೊಂಡಿದ್ದಾರೆ. ದಾವಣಗೆರೆ ಜಿಲ್ಲಾ ತೆರಿಗೆ ಸಲಹೆಗಾರರ ಸಂಘದ ಅಧ್ಯಕ್ಷರೂ, ದಾವಣಗೆರೆ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆಯ ನಿರ್ದೇಶಕರೂ ಆಗಿರುವ ರಾಧೇಶ್ ಅವರ ನೇಮಕ ಕುರಿತಂತೆ ಎಫ್.ಕೆ. ಸಿ.ಸಿ.ಐ. ಅಧ್ಯಕ್ಷ ಡಾ. ಐ.ಎಸ್. ಪ್ರಸಾದ್ ಅವರು ಆದೇಶ ಹೊರಡಿಸಿದ್ದಾರೆ.







**ದೇಹದ ತೂಕ ಹೆಚ್ಚಿಸಿಕೊಳ್ಳಿ ಅಥವಾ ತೂಕ ಕಡಿಮೆ ಮಾಡಿಕೊಳ್ಳಿ 100% ವೈಜ್ಞಾನಿಕ ಹಾಗೂ ಸುರಕ್ಷಿತ**
**GAIN WEIGHT OR LOSE WEIGHT**
**Contact: 91645 46459**

**ಸೈಟ್‌ಗಳು ಮಾರಾಟಕ್ಕಿವೆ**
ಬಾಲಾಜಿ ಲೇಔಟ್‌ನಲ್ಲಿ 30x50 ಉತ್ತರ ಅಕ್ಕ-ಪಕ್ಕ, ಡಾಲರ್ಸ್ ಕಾಲೋನಿಯಲ್ಲಿ 30x40 ಉತ್ತರ, ಆಂಜನೇಯ ಬಡಾವಣೆಯಲ್ಲಿ 40x65 ಉತ್ತರ, 40x60 ದಕ್ಷಿಣ
**ಸ್ವಾಮಿ ಏಜೆಂಟ್ ವಿದ್ಯಾನಗರ**
**97421 44715**

**ಸೈಟುಗಳು ಮಾರಾಟಕ್ಕಿವೆ**
ಹರಿಹರ ನಗರದಲ್ಲಿ ದೂಡಾ ಅಪ್ರೂವ್ಡ್ ಸೈಟುಗಳು ವಿಶೇಷ ರಿಯಾಯ್ತಿಯಲ್ಲಿ ಮಾರಾಟಕ್ಕಿವೆ. Rs. 999 Sq.ft ಹಾಗೂ ಸುಲಭ ಕಂತಿನಲ್ಲಿ ಲಭ್ಯ. 30x40, 30x50
**94829-48699, 94814-58699, 93431-10009**

**ಕೆಲಸಕ್ಕೆ ಬೇಕಾಗಿದ್ದಾರೆ**
ಶಿವ ಸೈಬರ್‌ನಲ್ಲಿ ಡಿಟಿಪಿ ಮತ್ತು ಜೆರಾಕ್ಸ್ ಮಾಡಲು ಯುವಕ ಮತ್ತು ಯುವತಿಯರು ಕೆಲಸಕ್ಕೆ ಬೇಕಾಗಿದ್ದಾರೆ.
**ಮೊ. 80737 82814**

**KHB ನಲ್ಲಿ Corner Site ಮಾರಾಟಕ್ಕಿದೆ**
ತುಂಗಭದ್ರಾ ಬಡಾವಣೆ (KHB) ಯಲ್ಲಿ 100ft ರೋಡ್‌ನಲ್ಲಿ 56×79 ಮತ್ತು ಬೋರ್‌ವೆಲ್, ಕಾಂಪೌಂಡ್ ಅಳವಡಿಸಿರುವ ಉತ್ತರ ಪೂರ್ವ ಮುಖವಾಗಿರುವ ಮೂಲೆ ನಿವೇಶನ ಮಾರಾಟಕ್ಕಿದೆ.
**ಸಂಪರ್ಕಿಸಿ: 81973 00410**

**WANTED**
sales executives for INDIA'S NO-1 BRAND FENESTA WINDOWS AND DOORS.
**SPANDANA AND CO**
NEAR JAYADEVA CIRCLE HADADI ROAD, DAVANGERE
**Call 99806 60426**

**SITES FOR SALE**
Sites Sales in MCC B' Block, 47×60 & Kuvempu Badavane 40×60
**Contact 97424 34049**

**AVOID MOSQUITOES**
Mosquito Net for Doors and windowsh, MDF Design Boards available.
**SRI GOWRI ENTERPRISES**
# 7C2, 4th Cross, Karur Industrial Area, Near D.C Office, P.B Road, Davangere.
**72049 94628**

**ಮನೆ ಲೀಸ್/ಬಾಡಿಗೆಗಿದೆ**
# 5626/7 "ಜ್ಯೋತಿ ನಿಲಯ" ಎಸ್.ಎಸ್. ಬಡಾವಣೆ, 'ಬಿ'ಬ್ಲಾಕ್, ಡಬಲ್ ಬೆಡ್ ರೂಮ್ ವಾಸ್ತು ಪ್ರಕಾರವಿದ್ದು, ಗ್ರೌಂಡ್ ಫ್ಲೋರ್ ಮನೆ, ಅಳತೆ 50x30 ಶುದ್ಧ ಸಸ್ಯಹಾರಿಗಳಿಗೆ ಮಾತ್ರ, ಯಾವುದೇ ಮಧ್ಯವರ್ತಿಗಳಿಗೆ ಅವಕಾಶವಿಲ್ಲ. ಶ್ರೀ ರಾಘವೇಂದ್ರ ನರ್ಸಿಂಗ್ ಕಾಲೇಜ್ ಹತ್ತಿರ, ಇಂಜಿನಿಯರ್ ಅಸೋಸಿಯೇಷನ್ ಬಿಲ್ಡಿಂಗ್.
**73490 63919 ಜ್ಯೋತಿ ಎಂ.ಆರ್**
**97417 40929 ರಾಮ್ ಕಿಶನ್**

**ಸೈಟ್ ಮಾರಾಟಕ್ಕಿದೆ**
SS Hitech ಹಾಸ್ಪಿಟಲ್ ರಸ್ತೆ ಪೆಟ್ರೋಲ್ ಬಂಕ್ ಪಕ್ಕದಲ್ಲಿ 3450 ಚ. ಅಡಿ ಸೈಟ್ ನಂ.1 ಮಾರಾಟಕ್ಕಿದೆ.
**81973 00410**

**ಅಣಬೆಗಳು ದೊರೆಯುತ್ತವೆ**
ರಕ್ತದೊತ್ತಡ ಮತ್ತು ಡಯಾಬಿಟಿಸ್ ಹಾಗೂ ಹೃದಯ ಸಂಬಂಧಿರೋಗ ನಿಯಂತ್ರಣಕ್ಕೆ ಅಗತ್ಯ ಪೋಷಕಾಂಶಗಳುಳ್ಳ ಅಣಬೆಗಳು ಡಿ.ಸಿ.ಎಂ. ಟೌನ್‌ಶಿಪ್‌ನಲ್ಲಿ ದೊರೆಯುತ್ತವೆ. ಸಂಪರ್ಕಿಸಿ
**08192 255433**

**ಮನೆ ಮಾರಾಟಕ್ಕಿದೆ**
# 5626/7 "ಜ್ಯೋತಿ ನಿಲಯ" ಎಸ್.ಎಸ್. ಬಡಾವಣೆ, 'ಬಿ'ಬ್ಲಾಕ್, ಡಬಲ್ ಬೆಡ್ ರೂಮ್ ವಾಸ್ತು ಪ್ರಕಾರವಿದ್ದು, ಗ್ರೌಂಡ್ ಫ್ಲೋರ್ ಮನೆ, ಅಳತೆ 50x30 ಶುದ್ಧ ಸಸ್ಯಹಾರಿಗಳಿಗೆ ಮಾತ್ರ, ಯಾವುದೇ ಮಧ್ಯವರ್ತಿಗಳಿಗೆ ಅವಕಾಶವಿಲ್ಲ. ಶ್ರೀ ರಾಘವೇಂದ್ರ ನರ್ಸಿಂಗ್ ಕಾಲೇಜ್ ಹತ್ತಿರ, ಇಂಜಿನಿಯರ್ ಅಸೋಸಿಯೇಷನ್ ಬಿಲ್ಡಿಂಗ್.
**73490 63919 ಜ್ಯೋತಿ ಎಂ.ಆರ್**
**97417 40929 ರಾಮ್ ಕಿಶನ್**

**ಮನೆಗಳು ಬಾಡಿಗೆಗೆ/ಲೀಸ್‌ಗೆ**
ಶಾಮನೂರು ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ 2ನೇ ಮಹಡಿಯಲ್ಲಿ ಮಿಡಿಯಂ, 2 ಬೆಡ್‌ರೂಂಗಳುಳ್ಳ 2 ಮನೆಗಳು ಬಾಡಿಗೆಗೆ/ಲೀಸ್‌ಗೆ ಇರುತ್ತವೆ (ಸಸ್ಯಹಾರಿಗಳಿಗೆ ಮಾತ್ರ)
**94488 74011**

**ಸೈಟ್‌ಗಳು ಮಾರಾಟಕ್ಕಿವೆ**
ಸಿದ್ದವೀರಪ್ಪ ಬಡಾವಣೆಯಲ್ಲಿ 30x40 ಉತ್ತರ, 48x50 ಪಶ್ಚಿಮ, 40x70 ದಕ್ಷಿಣ
**86181 82332**

**ಕೆಲಸಕ್ಕೆ ಬೇಕಾಗಿದ್ದಾರೆ**
DTP ಟೈಪಿಂಗ್, ಜೆರಾಕ್ಸ್ ಮಾಡಲು ಅನುಭವವುಳ್ಳ ಮಹಿಳೆಯರು ಬೇಕಾಗಿದ್ದಾರೆ.
**ನ್ಯೂ ನೇಚರ್ ಕ್ರಿಯೇಷನ್**
**88808 89806**
**70192 72603**

**Rooms to let for Ladies**
Students or Employees with all facilities in M. C. C. B. Block, 2nd main, Davanagere
Contact
**9742434049**

**TO-LET**
First Floor, 1 BHK House at 8th Main, P.J. Extension. is available for Renr/Lease
**Contact 76764 92366**

**ನೇರ ಪರೀಕ್ಷೆಗಳು**
ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ
SSLC, PUC Technical & Non Tecnical Courses Pharmacy & BHMS (Goverment & Private College)
**ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್**
ಸೋಮ ಮೆಡಿಕಲ್ಸ್ ಮೇಲೆ ಗಣೇಶ ದೇವಸ್ಥಾನದ ಹಿಂಭಾಗ, ರಾಂ&ಕೋ ಸರ್ಕಲ್, ದಾವಣಗೆರೆ.
**87490 24789, 82173 02649**


# ಕಸಾಪ ಚುನಾವಣೆ : ಹರಿಹರ ತಾ.ನಲ್ಲಿ ಶೇ.40 ಮತದಾನ

ಹರಿಹರ, ನ.21- ಕನ್ನಡ ಸಾಹಿತ್ಯ ಪರಿಷತ್ತಿನ ಚುನಾವಣೆಯಲ್ಲಿ ಹರಿಹರ ತಾಲ್ಲೂಕಿನಲ್ಲಿ ಶೇ. 40 ರಷ್ಟು ಮತದಾನ ನಡೆದಿದೆ ಎಂದು ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ ತಿಳಿಸಿದ್ದಾರೆ.

ನಗರದ ಸರ್ಕಾರಿ ಪ್ರೌಢಶಾಲೆ ಮತ್ತು ಮಲೇಬೆನ್ನೂರು ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಮತದಾನ ನಡೆಯಿತು.

ಹರಿಹರ ನಗರದ ಮತಗಟ್ಟೆಯಲ್ಲಿ 1,213 ಮತದಾರರಲ್ಲಿ 358 ಪುರುಷರು ಮತ್ತು 100 ಮಹಿಳಾ ಮತದಾರರು ಸೇರಿದಂತೆ ಒಟ್ಟು 458 ಮತದಾರರು ಮತದಾನ ಮಾಡಿದ್ದಾರೆ. ಮಲೇಬೆನ್ನೂರಿನಲ್ಲಿ 900 ಮತದಾರರಲ್ಲಿ 303 ಮತದಾರರು ತಮ್ಮ ಮತವನ್ನು ಹಾಕಿದ್ದಾರೆ.




## ಬಿ. ವಾಮದೇವಪ್ಪಗೆ 351, ಶಿವಕುಮಾರ ಕುರ್ಕಿಗೆ 98 ಮತಗಳು

ಸಂಜೆ ನಡೆದ ಮತ ಎಣಿಕೆಯಲ್ಲಿ ಜಿಲ್ಲಾ ಅಧ್ಯಕ್ಷ ಸ್ಥಾನದ ಅಭ್ಯರ್ಥಿ ವಾಮದೇವಪ್ಪ ಅವರಿಗೆ 351 ಮತ್ತು ಶಿವಕುಮಾರ ಕುರ್ಕಿ ಅವರಿಗೆ 98 ಮತಗಳು ಲಭ್ಯವಾಗಿವೆ. 9 ಮತಗಳು ತಿರಸ್ಕೃತವಾಗಿವೆ.

ರಾಜ್ಯಾಧ್ಯಕ್ಷ ಸ್ಥಾನಕ್ಕೆ ನಡೆದ ಮತದಾನದಲ್ಲಿ ಶೇಖರಗೌಡ ಮಾಲಿ ಪಾಟೀಲ್ ಅವರಿಗೆ 268 ಮತ್ತು ಮಹೇಶ್ ಜೋಷಿ ಅವರಿಗೆ 117 ಮತಗಳು ಬಿದ್ದಿವೆ.

ಈ ಸಂದರ್ಭದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷ ಎಸ್. ಹೆಚ್. ಹೂಗಾರ್, ನಿವೃತ್ತ ಪ್ರೊ. ಎಸ್.ಎ. ಭಿಕ್ಷಾವರ್ತಿಮಠ, ಹಿರಿಯ ಸಾಹಿತಿಗಳಾದ ಸಿ.ವಿ ಪಾಟೀಲ್, ಹುಲಿಕಟ್ಟಿ ಹಾಲೇಶಪ್ಪ, ಕಲೀಂ ಭಾಷಾ, ಶಿವಕುಮಾರ್ ಕೊಂಡಜ್ಜಿ, ಕಾರ್ಮಿಕ ಮುಖಂಡ ಹೆಚ್.ಕೆ. ಕೊಟ್ರಪ್ಪ, ಮಾಜಿ ದೂಡಾ ಸದಸ್ಯ ಹೆಚ್. ನಿಜಗುಣ, ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷರಾದ ರೇವಣಸಿದ್ದಪ್ಪ ಅಂಗಡಿ, ಡಿ. ಎಂ. ಮಂಜುನಾಥಯ್ಯ, ನಿವೃತ್ತ ಮುಖ್ಯೋಪಾಧ್ಯಾಯ ಎಂ.ಎನ್. ಬಸವರಾಜಪ್ಪ, ವೈ. ಎನ್. ಕೃಷ್ಣಮೂರ್ತಿ, ಎಸ್.ಜೆ.ವಿ.ಪಿ. ಕಾಲೇಜು ನಿರ್ದೇಶಕ ನಂದಿಗಾವಿ ತಿಪ್ಪೇಸ್ವಾಮಿ ಮತ್ತಿತರರು ಉಪಸ್ಥಿತರಿದ್ದರು.

## ಹರಪನಹಳ್ಳಿ : ವೀರಭದ್ರೇಶ್ವರ ಸ್ವಾಮಿ ಅಗ್ನಿಕುಂಡ ಕಾರ್ಯಕ್ರಮ



ಹರಪನಹಳ್ಳಿ, ನ.21- ಪಟ್ಟಣದ ಹಳೇ ಬಸ್ ನಿಲ್ದಾಣದಲ್ಲಿರುವ ಶ್ರೀ ವೀರಭದ್ರೇಶ್ವರ ಸ್ವಾಮಿ ದೇವರ ಅಗ್ನಿಕುಂಡ ಹಾಯುವ ಧಾರ್ಮಿಕ ಕಾರ್ಯಕ್ರಮ ಭಾನುವಾರ ಸಂಜೆ ಜರುಗಿತು.

ಪಟ್ಟಣದ ಮೇಗಳಪೇಟೆಯಲ್ಲಿರುವ ಗುಗ್ಗಳ ವೀರಭದ್ರೇಶ್ವರ ದೇವಸ್ಥಾನದಿಂದ ಪಲ್ಲಕ್ಕಿಯಲ್ಲಿ ವೀರಭದ್ರೇಶ್ವರ ದೇವರ ಉತ್ಸವ ಮೂರ್ತಿಯನ್ನು ಇಟ್ಟುಕೊಂಡು ಹಿರೇಕೆರೆಯಲ್ಲಿ ಗಂಗಾ ಪೂಜೆ ನೆರವೇರಿಸಿದ ನಂತರ ನಂದಿಕೋಲು, ಸಮಾಳ ಸೇರಿದಂತೆ ಸಕಲ ವಾದ್ಯಗಳೊಂದಿಗೆ ಹಳೇ ಬಸ್ ನಿಲ್ದಾಣದಲ್ಲಿರುವ ವೀರಭದ್ರೇಶ್ವರ ದೇವಸ್ಥಾನಕ್ಕೆ ಮೆರವಣಿಗೆ ಮೂಲಕ ಅದ್ದೂರಿಯಾಗಿ ಕರೆ ತಂದು, ದೇವಸ್ಥಾನ ಮುಂಭಾಗದಲ್ಲಿ ಅಗ್ನಿ ಕುಂಡದಲ್ಲಿ ಜೋಡಿಸಲಾದ ಕಟ್ಟಿಗೆಗೆ ಪುರವಂತರು ಧಾರ್ಮಿಕ ವಿಧಿ, ವಿಧಾನಗಳ ಮೂಲಕ ಪೂಜೆ ನೆರವೇರಿಸಿ ಅಗ್ನಿ ಸ್ಪರ್ಶ ಆದ ನಂತರ ಭಕ್ತರಿಗೆ ಅವಕಾಶ ಮಾಡಿ ಕೊಡಲಾಯಿತು.

ಈ ಸಂದರ್ಭದಲ್ಲಿ ಜಿ.ಎಂ ಗಿರೀಶ ಸ್ವಾಮಿ ಮತ್ತು ಪಿ.ಬಿ ಗೌಡ, ಪ್ರವೀಣ್ ಕುಮಾರ್, ಶಶಿಧರ್ ಪೂಜಾರ್ ಕೌಟಿ ವಾಗೀಶ್, ಪಿ. ಮಹೇಶ್, ಮಂಜುನಾಥ್ ಆಚಾರ್ಯ ದಂಡೆಪ್ಪರ್ ವೀರಭದ್ರ ಸೇರಿದಂತೆ ಪೂಜಾರ್ ವಂಶಸ್ಥರು ಇದ್ದರು.

# ಸರ್ವೇಕ್ಷಣೆ ಸಮೀಕ್ಷೆ : ದಾವಣಗೆರೆಗೆ 4ನೇ ಸ್ಥಾನ

**(1ನೇ ಪುಟದಿಂದ)** ನಡೆಸಲಾಗಿತ್ತು. ಇದರಲ್ಲಿ ತ್ಯಾಜ್ಯ ಸಂಗ್ರಹಣೆ, ವಿಲೇವಾರಿ ಮತ್ತು ಸಂಸ್ಕರಣೆ, ಸಾರ್ವಜನಿಕ ಶೌಚಾಲಯಗಳ ನಿರ್ವಹಣೆ, ತ್ಯಾಜ್ಯ ನೀರು ಸಂಸ್ಕರಣೆ ಅಳವಡಿಸಿಕೊಂಡ ಮಾದರಿ, ರಸ್ತೆ ವಿಭಜಕಗಳಲ್ಲಿರುವ ಗಿಡ ಮರಗಳ ನಿರ್ವಹಣೆ, ನಗರ ಸೌಂದರ್ಯೀಕರಣ ಮತ್ತು ಈ ಬಗ್ಗೆ ಸಾರ್ವಜನಿಕರ ಅಭಿಪ್ರಾಯಗಳನ್ನು ಪರಿಗಣಿಸಲಾಗಿತ್ತು ಎಂದು ಮಾಹಿತಿ ನೀಡಿದರು.

ಪಾಲಿಕೆಯಲ್ಲಿ ಕಳೆದ ಒಂದೂವರೆ ವರ್ಷಗಳಿಂದ ತೆಗೆದುಕೊಂಡ ದಿಟ್ಟ ಕ್ರಮಗಳು, ಮನೆ ಮನೆಗಳಿಂದ ತ್ಯಾಜ್ಯ ಸಂಗ್ರಹಣೆಗಾಗಿ ಹೆಚ್ಚುವರಿ ವಾಹನಗಳ ಖರೀದಿ, ಕಸವನ್ನು ವಿಂಗಡಿಸಿ ನೀಡಲು ಸಾರ್ವಜನಿಕರಲ್ಲಿ ಮೂಡಿಸಿದ ಜಾಗೃತಿ, ಬಯಲು ಶೌಚ ಮುಕ್ತ ನಗರ ದೃಢೀಕರಣ, ತ್ಯಾಜ್ಯ ವಿಂಗಡಣೆ ಹಾಗೂ ಸ್ವಚ್ಛತೆಗೆ ಹೆಚ್ಚಿನ ಆದ್ಯತೆ ನೀಡಿರುವುದು ರ್‍ಯಾಂಕಿಂಗ್ ಏರಿಕೆಗೆ ಸಹಕಾರಿಯಾಗಿವೆ. ಇದಕ್ಕಾಗಿ ಶ್ರಮಿಸಿದ ಪಾಲಿಕೆಯ ಪೌರ ಕಾರ್ಮಿಕರು ಸಹಕರಿಸಿದ ಅಧಿಕಾರಿಗಳು, ಸಿಬ್ಬಂದಿವರ್ಗ, ಪಾಲಿಕೆ ಸದಸ್ಯರು, ಜಿಲ್ಲಾಧಿಕಾರಿಗಳು, ಜಿಲ್ಲಾ ಉಸ್ತುವಾರಿ ಸಚಿವರು, ಸಂಸದರಿಗೆ ಧನ್ಯವಾದ ಅರ್ಪಿಸುವುದಾಗಿ ಮೇಯರ್ ವೀರೇಶ್ ಇದೇ ಸಂದರ್ಭದಲ್ಲಿ ಹೇಳಿದರು.

ಸಮೀಕ್ಷೆಯಲ್ಲಿ ರಾಷ್ಟ್ರಮಟ್ಟದಲ್ಲಿ 100ನೇ ಸ್ಥಾನದೊಳಗೆ ಹಾಗೂ ರಾಜ್ಯದಲ್ಲಿ 10ನೇ ಸ್ಥಾನದಲ್ಲಿ ಬರುವ ಗುರಿ ಇಟ್ಟುಕೊಂಡಿದ್ದೆವು. ಅದರಲ್ಲಿ ಒಂದು ಗುರಿಯಲ್ಲಿ ಯಶ ಕಂಡಿದ್ದೇವೆ. ಮುಂದಿನ ವರ್ಷದ ಸಮೀಕ್ಷೆಯಲ್ಲಿ ರಾಷ್ಟ್ರಮಟ್ಟದಲ್ಲಿ 50ನೇ ರಾ ್ಯಂಕ್ ಹಾಗೂ ರಾಜ್ಯ ಮಟ್ಟದಲ್ಲಿ ಪ್ರಥಮ ಅಥವಾ ದ್ವಿತೀಯ ಸ್ಥಾನಕ್ಕೆ ಬರುವಂತಾಗಲು ಸಾರ್ವಜನಿಕರು, ಉದ್ದಿಮೆದಾರರು ಸಹಕರಿಸಬೇಕು ಎಂದು ಹೇಳಿದರು.

ಸಾರ್ವಜನಿಕರು ತ್ಯಾಜ್ಯವನ್ನು ರಸ್ತೆ, ಚರಂಡಿ ಹಾಗೂ ಖಾಲಿ ಜಾಗಗಳಲ್ಲಿ ಎಸೆಯದೆ ಮೂಲದಲ್ಲಿಯೇ ವಿಂಗಡಿಸಿ ಪಾಲಿಕೆ ವಾಹನಗಳಿಗೆ ನೀಡಬೇಕು. ಪ್ಲಾಸ್ಟಿಕ್ ಬಳಕೆ ಕಡಿಮೆ ಮಾಡಿ, ಅನಗತ್ಯ ತಾಜ್ಯ ಉತ್ಪತ್ತಿ ಕಡಿಮೆ ಮಾಡಬೇಕು. ಮರುಬಳಕೆ ಮಾಡಬಹುದಾದ ವಸ್ತುಗಳಿಗೆ ಆದ್ಯತೆ ನೀಡುವ ಮೂಲಕ ಸ್ವಚ್ಛ ಹಾಗೂ ಸೌಂದರ್ಯ ಕಾಪಾಡಲು ಸಾರ್ವಜನಿಕರು ಹಾಗೂ ಉದ್ದಿಮೆದಾರರು ಪಾಲಿಕೆಯೊಂದಿಗೆ ಕೈ ಜೋಡಿಸಬೇಕು ಎಂದು ಮನವಿ ಮಾಡಿದರು.

ಆದಷ್ಟು ಸಾರ್ವಜನಿಕರು ಹಸಿ ಕಸವನ್ನು ಕಾಂಪೋಸ್ಟ್ ಗೊಬ್ಬರವನ್ನಾಗಿ ಮಾಡಿ ಮನೆಗಳ ಮುಂದಿನ ಗಿಡಗಳಿಗೆ ಬಳಕೆ ಮಾಡಿದರೆ ಪರಿಸರ ಹಾಗೂ ಆರೋಗ್ಯ ಎರಡೂ ಉತ್ತಮವಾಗಿರುತ್ತದೆ. ಕಲ್ಯಾಣ ಮಂಟಪಗಳಲ್ಲಿ ಹಸಿ ಕಸವನ್ನು 10 ರಿಂದ 20 ಅಡಿ ಜಾಗದಲ್ಲಿ ಹಾಕಿ ಕಾಂಪೋಸ್ಟ್ ಗೊಬ್ಬರ ಮಾಡಬೇಕು. ಈ ಬಗ್ಗೆ ಅರಿವು ಮೂಡಿಸಲು ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು ಎಂದು ವೀರೇಶ್ ಹೇಳಿದರು.

ಮದುವೆ ಸಮಾರಂಭಗಳಲ್ಲಿ ಶೂನ್ಯ ತಾಜ್ಯ ಪರಿಕಲ್ಪನೆ ಇತ್ತೀಚಿನ ದಿನಗಳಲ್ಲಿ ಪ್ರಚಲಿತವಾಗುತ್ತಿದ್ದು, ನಗರದಲ್ಲೂ ಈ ಬಗ್ಗೆ ಯುವಕರು, ಸಮಾಜ ಪ್ರಮುಖರು, ಮುಖಂಡರು ಚಿಂತನೆ ಮಾಡಬೇಕಿದೆ ಎಂದು ಹೇಳಿದರು. ಕಾಲೇಜು ವಿದ್ಯಾರ್ಥಿಗಳು ಸ್ವಯಂ ಪ್ರೇರಿತವಾಗಿ ತ್ಯಾಜ್ಯ ನಿರ್ವಹಣೆ, ಸ್ವಚ್ಛತೆ ಕಾರ್ಯಗಳಲ್ಲಿ ಸ್ವಯಂ ಪ್ರೇರಿತರಾಗಿ ಭಾಗವಹಿಸಬೇಕು.

ಹಂದಿಗಳನ್ನು ಸ್ಥಳಾಂತರಿಸಲು ನಗರದ ಹೊರಗಡೆ ಜಾಗ ಗುರುತಿಸಿದ್ದು, ಕಾಂಪೌಂಡ್ ಕಾಮಗಾರಿ ನಡೆಯುತ್ತಿದ್ದು, ಶೀಘ್ರವೇ ಹಂದಿಗಳ ಸ್ಥಳಾಂತರ ಮಾಡಲಾಗುವುದು ಎಂದು ಪ್ರಶ್ನೆಯೊಂದಕ್ಕೆ ಮೇಯರ್ ಉತ್ತರಿಸಿದರು.

ನಗರದ ಸ್ವಚ್ಛತೆ ಕಾಪಾಡಲು ಹೆಚ್ಚುವರಿಯಾಗಿ 272 ಪೌರ ಕಾರ್ಮಿಕರನ್ನು ನೇಮಕ ಮಾಡಿಕೊಳ್ಳಲು ಪ್ರಸ್ತಾವನೆ ಸಲ್ಲಿಸಿದ್ದು, ಸರ್ಕಾರ ಅನುಮತಿ ನೀಡಬೇಕಿದೆ. ಈಗಾಗಲೇ ತಾಜ್ಯ ನಿರ್ವಹಣೆಗಾಗಿ 47 ವಾಹನಗಳನ್ನು ಖರೀದಿಸಲಾಗಿದೆ ಎಂದರು.

ನಗರದಲ್ಲಿನ ಬಿಡಾಡಿ ದನಗಳಿಗಾಗಿ ಮಹಾನಗರ ಪಾಲಿಕೆಯಿಂದ ಗೋಶಾಲೆ ತೆರೆಯುವ ಚಿಂತನೆ ಇದ್ದು, ಸ್ಥಳದ ಪರಿಶೀಲನೆ ನಡೆಯುತ್ತಿದೆ ಎಂದ ಅವರು, ಗೋಶಾಲೆ ನಂತರ ಅಕ್ರಮ ಕಸಾಯಿ ಖಾನೆಗಳ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಹೇಳಿದರು.

ಪಾಲಿಕೆ ಆಯುಕ್ತ ವಿಶ್ವನಾಥ ಪಿ. ಮುದಜ್ಜಿ, ಸ್ಥಾಯಿ ಸಮಿತಿ ಸದಸ್ಯರುಗಳಾದ ಕೆ.ಪ್ರಸನ್ನ, ಎಲ್.ಡಿ. ಗೋಣೆಪ್ಪ, ಪಾಲಿಕೆ ಸದಸ್ಯೆ ಯಶೋಧಮ್ಮ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

### ಕಾಂಗ್ರೆಸ್ ಅವಧಿಯಲ್ಲೇಕೆ ಸಮಸ್ಯೆ ಬಗೆಹರಿಯಲಿಲ್ಲ ?

ಐದು ವರ್ಷ ಅಧಿಕಾರದಲ್ಲಿದ್ದ ಕಾಂಗ್ರೆಸ್ ನಾಯಕರು ಏಕೆ ರೈಲ್ವೇ ಅಂಡರ್ ಪಾಸ್ ಸಮಸ್ಯೆ ಬಗೆ ಹರಿಸಲಿಲ್ಲ? ಈಗ ಅಲ್ಲಿನ ಸಮಸ್ಯೆ ಬಗ್ಗೆ ಮಾತನಾಡುವ ನಾಯಕರು ಅಂದು ಏನು ಮಾಡುತ್ತಿದ್ದರು? ಎಂದು ಖಾರವಾಗಿ ಪ್ರಶ್ನಿಸಿರುವ ಮೇಯರ್ ಎಸ್.ಟಿ. ವೀರೇಶ್, ಜನರಿಗೆ ಸುಳ್ಳು ಹೇಳುವುದು ಕಾಂಗ್ರೆಸ್ ಇತಿಹಾಸ. ಇಲ್ಲೂ ಅದನ್ನು ಮುಂದುವರೆಸಿದ್ದಾರೆ ಎಂದು ಹೇಳಿದರು.

ಪಾಲಿಕೆ ಮುಂಭಾಗದ ರೈಲ್ವೇ ಕೆಳ ಸೇತುವೆ ಬಗ್ಗೆ ಕಾಂಗ್ರೆಸ್ ಮುಖಂಡರ ಟೀಕೆಗಳಿಗೆ ಮೇಲಿನಂತೆ ಪ್ರತಿಕ್ರಿಯಿಸಿದ ಅವರು, ನೂರಕ್ಕೆ ನೂರರಷ್ಟು ಅಲ್ಲಿದ್ದ ಸಮಸ್ಯೆ ಶಾಶ್ವತವಾಗಿ ಬಗೆಹರಿದಿದೆ ಎಂದು ಸ್ಪಷ್ಟಪಡಿಸಿದರು.

### 'ನೀರಗಂಟಿ ಸಮಸ್ಯೆ' ಕಾಂಗ್ರೆಸ್ ಪಾಪದ ಕೂಸು

ಸರ್ಕಾರದ ಆದೇಶ ಇರದಿದ್ದರೂ ನೀರಗಂಟಿಗಳನ್ನು ನೇಮಿಸಿಕೊಂಡು ವೇತನ ನೀಡದೇ ಇದ್ದುದು ಕಾಂಗ್ರೆಸ್ ಅವಧಿಯಲ್ಲಿ. ಈ ಸಮಸ್ಯೆ ಕಾಂಗ್ರೆಸ್‌ನ ಪಾಪದ ಕೂಸು ಎಂದು ಮೇಯರ್ ವೀರೇಶ್ ಹೇಳಿದರು.

ಹಲವಾರು ವರ್ಷಗಳಿಂದ ಕೆಲಸ ಮಾಡಿಯೂ ವೇತನವಿಲ್ಲದೆ ನೀರಗಂಟಿಗಳ ಕುಟುಂಬದವರು ಕಣ್ಣೀರು ಹಾಕುತ್ತಿದ್ದಾರೆ. ಅವರ ಶಾಪಕ್ಕೆ ಕಾಂಗ್ರೆಸ್ ಗುರಿಯಾಗುತ್ತದೆ. ನಮ್ಮ ಅವಧಿಯಲ್ಲಿ ಮಾನವೀಯತೆ ದೃಷ್ಟಿಯಿಂದ ನಾಲ್ಕೈದು ಜನರನ್ನು ಬೇರೆ ಕೆಲಸಗಳಿಗೆ ನೇಮಿಸಿಕೊಂಡಿದ್ದೇವೆ. ಉಳಿದವರ ನೇಮಕಕ್ಕೂ ಅನುಮತಿ ನೀಡುವಂತೆ ಸರ್ಕಾರಕ್ಕೆ ಪತ್ರ ಬರೆದಿದ್ದೇವೆ ಎಂದರು. ಶೀಘ್ರವೇ ಅವರಿಗೆ ನ್ಯಾಯ ಕಲ್ಪಿಸುತ್ತೇವೆ ಎಂದು ಭರವಸೆ ನೀಡಿದರು.


**ಬೇಕಾಗಿದ್ದಾರೆ**
ಮಾರ್ಕೆಟಿಂಗ್ ಫೀಲ್ಡ್: M/F, ಟೆಲಿ ಕಾಲರ್ Female, ಟೈಲರ್ Female, ಅಂಗಡಿ ಸಹಾಯಕರು ಸಂಪರ್ಕಿಸಿ : ಖಾಸಗಿ ಬಸ್ ನಿಲ್ದಾಣ, ಮಳಿಗೆ ಸಂಖ್ಯೆ 88, ದಾವಣಗೆರೆ
**78923 28599**

**ಬೇಕಾಗಿದ್ದಾರೆ**
ಸೆಕ್ಯೂರಿಟಿ ಗಾರ್ಡ್ಸ್ ಮತ್ತು ಸೆಕ್ಯೂರಿಟಿ ಸೂಪರ್ ವೈಸರ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ.
**ವಯಸ್ಸು:** 20 ರಿಂದ 45 ವರ್ಷ, **ವಿದ್ಯಾರ್ಹತೆ :** SSLC/PUC/BA, ಆಕರ್ಷಕ ವೇತನ + ESI+PF ಮತ್ತು ವಸತಿ ಸೌಲಭ್ಯ ವಿರುತ್ತದೆ. ದಾವಣಗೆರೆ ಸಿಟಿಯಲ್ಲಿ ಇರುವವರಿಗೆ ಮೊದಲ ಆದ್ಯತೆ ಕೊಡಲಾಗುವುದು
**97426 43222, 91088 50366**

**HOUSE FOR SALE**
Independent fully furnished ready to move in house built in 60x40 site for Sale. Car parking, 24/7 Municipal and bore water available.
**89513 68252**

**ಭೂಮಿಕಾ ಮ್ಯಾಟ್ರಿಮೊನಿ**
**ಲಿಂಗಾಯಿತ ವಧು-ವರರ ಕೇಂದ್ರ**
H.O : Near Coffee day, Nutana College Road, Vidyanagara, 2nd Main, Davangere
**77603 16576**
**90080 55813**

**ಸೈಟು ಮಾರಾಟಕ್ಕಿದೆ**
ಅಳತೆ 50x 80 ಬನಶಂಕರಿ ಬಡಾವಣೆ ಸೈಟ್ ನಂ. 8, # 4081 ಬೈಪಾಸ್, ಸಂಪರ್ಕಿಸಿರಿ ಮಧ್ಯವರ್ತಿಗಳಿಗೆ ಅವಕಾಶವಿಲ್ಲ
**95380 55959**

**WANTED**
Sales Executives (3 yrs)
Manager (5 yrs) (car)
Telecalling (F) (car)
Java-API Developer
SFDC Developer
**98444 92888**

**ಸುವರ್ಣ ಅವಕಾಶ**
ಮನೆಯಲ್ಲೇ ಕುಳಿತು, ಕೈ ಬರವಣಿಗೆ ಕೆಲಸ ಮಾಡಿ, ತಿಂಗಳಿಗೆ 7000 ರಿಂದ 14000 ಸಾವಿರದವರೆಗೆ ಸಂಪಾದಿಸಿ. ಸಂಪರ್ಕಿಸಿ :
**88844 63076**

**ಮನೆ ಬಾಡಿಗೆಗೆ/ಲೀಸ್‌ಗಿದೆ**
1ನೇ ಮಹಡಿ, 1 BHK ಮನೆ, 2ನೇ ಮತ್ತು 3ನೇ ಮಹಡಿ 2 BHK ಮನೆ, BIET ಕಾಲೇಜ್ ಹತ್ತಿರ, ವಿವೇಕಾನಂದ ಬಡಾವಣೆ, ಮಹೇಶ್ ಪಿಯು ಕಾಲೇಜ್ ಹಿಂಭಾಗ, ದಾವಣಗೆರೆ.
**97396 61632, 89044 34445**

**ಹುಡುಗರು ಬೇಕಾಗಿದ್ದಾರೆ**
ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ.
**ಜನತಾ ಖಾದಿ ಭಂಡಾರ**
**ಬಾಪೂಜಿ ಖಾದಿ ಭಂಡಾರ**
ಅಶೋಕ ರಸ್ತೆ, ದಾವಣಗೆರೆ

**ಮನೆ ಬಾಡಿಗೆಗೆ ಇದೆ**
ನಿಜಲಿಂಗಪ್ಪ ಬಡಾವಣೆ ನ್ಯಾಷನಲ್ ಕಾನ್ವೆಂಟ್ ಎದುರು 2 BHK ಮನೆ ಬಾಡಿಗೆಗೆ ಇದೆ. ಸಸ್ಯಹಾರಿಗಳಿಗೆ ಮಾತ್ರ
**97312 90256**


## ಕಸಾಪ ಅಧ್ಯಕ್ಷರಾಗಿ ಬಿ.ವಾಮದೇವಪ್ಪ

**(1ನೇ ಪುಟದಿಂದ)** ತಾಲ್ಲೂಕು ಕಚೇರಿ ಸಭಾಂಗಣ, ಸಾಸ್ವೆಹಳ್ಳಿಯ ನಾಡಾ ಕಚೇರಿ ಹಾಗೂ ಜಗಳೂರಿನ ತಾಲ್ಲೂಕು ಕಚೇರಿ ಮತ್ತು ನ್ಯಾಮತಿ ತಾಲ್ಲೂಕು ಕಚೇರಿಯಲ್ಲಿ ಮತದಾನ ನಡೆಯಿತು.

**ಗಣ್ಯರ ಹಕ್ಕು ಚಲಾವಣೆ :** ವಿರಕ್ತ ಮಠದ ಶ್ರೀ ಬಸವ ಪ್ರಭು ಸ್ವಾಮೀಜಿ, ಶಾಸಕರುಗಳಾದ ಎಸ್.ಎ.ರವೀಂದ್ರನಾಥ್, ಎಸ್.ವಿ. ರಾಮಚಂದ್ರಪ್ಪ, ದೂಡಾ ಅಧ್ಯಕ್ಷ ದೇವರಮನೆ ಶಿವಕುಮಾರ್, ವಿಧಾನ ಪರಿಷತ್ ಮಾಜಿ ಮುಖ್ಯ ಸಚೇತಕ ಡಾ.ಎ.ಹೆಚ್. ಶಿವಯೋಗಿ ಸ್ವಾಮಿ, ಹಿರಿಯ ಸಾಹಿತಿಗಳಾದ ಡಾ. ಎಂ.ಜಿ.ಈಶ್ವರಪ್ಪ, ಡಾ. ಎಚ್. ಎಸ್. ಮಂಜುನಾಥ್ ಕುರ್ಕಿ, ಎ.ಆರ್. ಉಜ್ಜಿನಪ್ಪ, ಬಾ.ಮ. ಬಸವರಾಜಯ್ಯ, ವಕೀಲ ಎಲ್. ಹೆಚ್. ಅರುಣ್ ಕುಮಾರ್ ಸೇರಿದಂತೆ ಪ್ರಮುಖರು ಮತ ಚಲಾವಣೆ ಮಾಡಿದರು.

# ಬಾಪೂಜಿ ಬ್ಯಾಂಕಿಗೆ 5.97 ಕೋಟಿ ಲಾಭ

**(1ನೇ ಪುಟದಿಂದ)** ಹೆಚ್ಚುವರಿ ಖರ್ಚು ವೆಚ್ಚಗಳು ಮತ್ತು ನಿವ್ವಳ ಲಾಭದ ಹಂಚಿಕೆಗೆ ಮಹಾಸಭೆಯ ಒಪ್ಪಿಗೆ ಕೋರಿದರು.

ಮತ್ತೋರ್ವ ಹಿರಿಯ ನಿರ್ದೇಶಕ ಡಾ.ಬಿ.ಎಸ್. ರೆಡ್ಡಿ ಅವರು ಮಾತನಾಡಿ, ಕಳೆದ 52 ವರ್ಷಗಳಲ್ಲಿ ಬ್ಯಾಂಕ್ ಅತ್ಯುತ್ತಮ ಸಾಧನೆ ಮಾಡಿದೆ. ಸಾಲಗಾರರಷ್ಟೇ ಜಾಮೀನುದಾ ರರಿಗೂ ಹೊಣೆಗಾರಿಕೆ ಇರುವುದರಿಂದ, ಜಾಮೀನು ನೀಡುವಾಗ ಸಾಲಗಾರ ಯಾವ ಉದ್ದೇಶಕ್ಕೆ ಸಾಲ ಪಡೆಯುತ್ತಾನೆ ಅಲ್ಲದೇ ಸಾಲ ಮರುಪಾವತಿ ಸರಿಯಾಗಿ ಮಾಡುತ್ತಿದ್ದಾನೆಯೇ ಎಂಬುದನ್ನು ಗಮನಿಸಬೇಕು. ಹೀಗೆ ಜಾಮೀನು ದಾರರೂ ಕಾಳಜಿ ವಹಿಸಿದರೆ ಬ್ಯಾಂಕಿನ ಏಳಿಗೆಗೆ ಸಹಕಾರಿಯಾಗುತ್ತದೆ ಎಂದರು.

ಹಿರಿಯ ಮುತ್ಸದ್ಧಿ ಡಾ.ಶಾಮನೂರು ಶಿವಶಂಕರಪ್ಪನವರು ಮತ್ತು ಐ.ಪಿ.ವಿಶ್ವಾರಾಧ್ಯರು ಬಾಪೂಜಿ ಬ್ಯಾಂಕನ್ನು ಹೆಮ್ಮರವಾಗಿ ಬೆಳೆಸಿದ್ದರೆ, ಮಾಜಿ ಸಚಿವರು ಬ್ಯಾಂಕಿನ ಉಪಾಧ್ಯಕ್ಷರೂ ಆದ ಎಸ್.ಎಸ್. ಮಲ್ಲಿಕಾರ್ಜುನ್ ಅವರು ಬ್ಯಾಂಕಿನ ಬೆಳವಣಿಗೆ ಮತ್ತು ಸ್ಥಿರತೆಗೆ ಕಾರಣೀಭೂತರಾಗಿದ್ದಾರೆ ಎಂದು ನಿರ್ದೇಶಕ ಡಾ.ಅರುಣ್ ಕುಮಾರ್ ನುಡಿದರು.

ಮಾಜಿ ಸಚಿವರೂ ಆದ ಉಪಾಧ್ಯಕ್ಷ ಎಸ್.ಎಸ್. ಮಲ್ಲಿಕಾರ್ಜುನ್, ನಿರ್ದೇಶಕರಾದ ಶಂಷಾದ್ ಬೇಗಂ, ಡಾ.ಹೆಚ್.ಶಿವಪ್ಪ, ಡಾ.ಪೂರ್ಣಿಮಾ, ಡಾ.ಕೆ. ಹನುಮಂತಪ್ಪ, ಡಾ. ಸಿ.ವೈ.ಸುದರ್ಶನ್, ಡಾ.ಎಂ. ಎಂ.ಲಿಂಗರಾಜ, ಕೆ.ಬೊಮ್ಮಣ್ಣ ಮತ್ತು ಕೆ.ಎಸ್. ವೀರೇಶ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಆರಂಭಕ್ಕೆ ಸೌಮ್ಯ ಸಂಗಡಿಗರು ಪ್ರಾರ್ಥಿಸಿದರು. ನಿರ್ದೇಶಕರಾದ ಡಾ.ಅರುಣ್ ಕುಮಾರ್ ಸ್ವಾಗತಿಸಿದರು. ಕೆ.ಎಸ್.ವೀರೇಶ್ ವಂದಿಸಿದರು. ಪ್ರಧಾನ ವ್ಯವಸ್ಥಾಪಕ ಜಿ.ವಿ.ಶಿವಶಂಕರ್ ಕಾರ್ಯಕ್ರಮ ನಿರೂಪಿಸಿದರು.

ಇದೇ ಸಂದರ್ಭದಲ್ಲಿ ಇತ್ತೀಚೆಗೆ ವಯೋ ನಿವೃತ್ತಿ ಹೊಂದಿದ ಉದ್ಯೋಗಿಗಳಾದ ಎಂ. ಕೊಟ್ರೇಶ್, ಎಸ್. ಜಗದೀಶಪ್ಪ, ಕೆ. ಪಾಲಾಕ್ಷಪ್ಪ ಮತ್ತು ವಿ.ಎಸ್. ವೀರಬಸಪ್ಪ ಅವರುಗಳನ್ನು ಸನ್ಮಾನಿಸಲಾಯಿತು. ಅಲ್ಲದೇ ಕರ್ನಾಟಕ ರಾಜ್ಯ ಪಟ್ಟಣ ಬ್ಯಾಂಕುಗಳ ಮಹಾಮಂಡಳ ನಡೆಸಿದ ಬ್ಯಾಂಕಿಂಗ್ ಮ್ಯಾನೇಜ್ ಮೆಂಟ್ ಕೋರ್ಸಿನಲ್ಲಿ ಉತ್ತೀರ್ಣರಾದ ಬ್ಯಾಂಕ್ ಸಿಬ್ಬಂದಿಗಳಿಗೆ ಸರ್ಟಿಫಿಕೆಟ್ ನೀಡಿ ಗೌರವಿಸಲಾಯಿತು.

ಬ್ಯಾಂಕಿನ ಹಿರಿಯ ಸಲಹೆಗಾರರಾದ ಡಿ.ವಿ. ರವೀಂದ್ರ ಮತ್ತು ಎಸ್.ಕಲ್ಲಪ್ಪ, ಶಾಖಾ ವ್ಯವಸ್ಥಾಪಕರುಗಳಾದ ಜಿ.ಓ.ಶಂಕರಪ್ಪ, ಬಿ.ಜಿ. ಬಸವರಾಜಪ್ಪ, ಎಂ.ಬಸವರಾಜ್, ಶೋಭಾ ಪಾಟೀಲ್, ಕೆ.ಎಂ.ಲಿಂಗೇಶ್, ಡಿ.ಜಿ.ರವಿ ಶಂಕರ್,ಜಿ.ಬಿ. ಮಂಜುನಾಥ ಪಾಟೀಲ್, ಎಂ.ಎಸ್.ಪ್ರಸನ್ನ ಮತ್ತು ಪಿ. ಎಸ್.ರವೀಂದ್ರ ಹಾಜರಿದ್ದರು. ಸೌಮ್ಯ ಮತ್ತು ಕೊಟ್ರಮ್ಮ ಗೀತಗಾಯನ ನಡೆಸಿಕೊಟ್ಟರು.

## ನೇತ್ರದಾನಿ ಗೌಡರ ಜಯರಾಜು ಲಿಂಗೈಕ್ಯ



ದಾವಣಗೆರೆ ಎಂ.ಸಿ. ಕಾಲೋನಿ 'ಬಿ' ಬ್ಲಾಕ್ 3ನೇ ಮೇನ್, 3ನೇ ಕ್ರಾಸ್ (ಮಾಮಾಸ್ ಜಾಯಿಂಟ್ ರೋಡ್, ಬಿಗ್ ಮಿಶ್ರಪೇಡಾ ಕ್ರಾಸ್ ಪಕ್ಕ) ನಿವಾಸಿ ಲಿಂ. ಗೌಡರ ಬಸವರಾಜಪ್ಪನವರ ಜೇಷ್ಠ ಪುತ್ರ
**ಜಿ. ಜಯರಾಜು** (52)
ಅವರು ದಿನಾಂಕ 21.11.2021ರ ಭಾನುವಾರ ಸಂಜೆ ಲಿಂಗೈಕ್ಯರಾದರು. ತಾಯಿ, ಪತ್ನಿ, ಪುತ್ರಿ, ಮೂವರು ಸಹೋದರರು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 22.11.2021ರ ಸೋಮವಾರ ಬೆಳಿಗ್ಗೆ 10 ಗಂಟೆಗೆ ನಗರದ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.
**ದುಃಖತಪ್ತ ಕುಟುಂಬ ವರ್ಗ**
**98452 56266, 98444 99668, 99163 28333**

## ನಾಲ್ಕನೇ ಪುಣ್ಯಸ್ಮರಣೆ




**ದಿ|| ಶರಣ ಹೆಚ್. ಈ. ಗಂಗಾಧರಯ್ಯ**
ಲಿಂಗೈಕ್ಯ : 28.11.2017

ನೀವು ನಮ್ಮನ್ನಗಲಿ ನಾಲ್ಕು ವರ್ಷಗಳಾದವು. ನಿಮ್ಮ ಆದರ್ಶಗಳೇ ನಮಗೆ ದಾರಿದೀಪ, ದೈಹಿಕವಾಗಿ ನೀವಿಲ್ಲದಿದ್ದರೂ, ನಿಮ್ಮ ನೆನಪುಗಳು ಶಾಶ್ವತವಾಗಿ ನಮ್ಮ ಮನಸ್ಸಿನಲ್ಲಿವೆ. ಭಗವಂತನು ನಿಮ್ಮ ಆತ್ಮಕ್ಕೆ ಚಿರಶಾಂತಿ ನೀಡಲಿ, ನೀವು ಹಾಕಿಕೊಟ್ಟ ಮಾರ್ಗದಲ್ಲೇ ಸದಾ ಮುನ್ನಡೆಯುತ್ತಿರುವ.

- : ದುಃಖತಪ್ತರು : -

ಲಿಂಗೈಕ್ಯರ ಧರ್ಮಪತ್ನಿ ಶರಣೆ ಕೆ.ಈ. ಅಂಬುಜಾಕ್ಷಿ , ಕಾರ್ಯದರ್ಶಿ, ನವಚೇತನ ಕಿಡ್ಸ್ ಮತ್ತು ಮಕ್ಕಳಾದ ಚಿ|| ತನುಷ್ ಮತ್ತು ಚಿ|| ತನೋಜ್,
ಲಿಂಗೈಕ್ಯರ ಸಹೋದರರಾದ ಶರಣ ಹೆಚ್.ಈ. ಬಸವಕುಮಾರಯ್ಯ ಮತ್ತು ಸಹೋದರಿಯರು, ಗೊಪ್ಪೇನಹಳ್ಳಿ.
ಶರಣ ಹೆಚ್.ಈ. ರಾಜಯ್ಯ, ಶರಣೆ ರತ್ನಮ್ಮ ಮತ್ತು ಮಕ್ಕಳು
ಶರಣ ಯು.ಜಿ. ಈಶ್ವರಪ್ಪ, ಶರಣೆ ಪ್ರಮೀಳಮ್ಮ ಮತ್ತು ಮಕ್ಕಳು, ಕುರುಡಿ.
ಹಾಗೂ ಸಿಬ್ಬಂದಿ ವರ್ಗ ನವಚೇತನ ಕಿಡ್ಸ್, ಶಿವಕುಮಾರಸ್ವಾಮಿ ಬಡಾವಣೆ, ದಾವಣಗೆರೆ.

## ಅಣಜಿ ಚೌಡ್ಕಿ ಶಿವರಾಮಪ್ಪ ನಿಧನ



ದಾವಣಗೆರೆ ತಾಲ್ಲೂಕು ಅಣಜಿ ಗ್ರಾಮದ ವಾಸಿ
ವಿಎಸ್‌ಎಸ್‌ಎನ್ ಮಾಜಿ ಕಾರ್ಯದರ್ಶಿ, ಅಣಜಿ ಗ್ರಾ.ಪಂ. ಮಾಜಿ ಸದಸ್ಯರಾದ
**ಶ್ರೀ ಚೌಡ್ಕಿ ಶಿವರಾಮಪ್ಪ**
ಇವರು ದಿನಾಂಕ 21.11.2021ರ ಭಾನುವಾರ ಸಂಜೆ 4.30ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 86 ವರ್ಷ ವಯಸ್ಸಾಗಿತ್ತು. ಇಬ್ಬರು ಪುತ್ರರು, ಐವರು ಪುತ್ರಿಯರು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು, ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಮಕ 22.11.2021ರ ಸೋಮವಾರ ಮಧ್ಯಾಹ್ನ 12 ಗಂಟೆಗೆ ಮೃತರ ಸ್ವಗ್ರಾಮ ಅಣಜಿ ಗ್ರಾಮದ ಮೃತರ ಜಮೀನಿನಲ್ಲಿ ನೆರವೇರಲಿದೆ.
**ದುಃಖತಪ್ತ ಕುಟುಂಬ ವರ್ಗ: ಮೊ; 80735 19254,**

## ಜಗಳೂರು ತಾಲ್ಲೂಕಿನ ಕಸಾಪ ಚುನಾವಣೆಯಲ್ಲಿ 46.08 ಮತದಾನ

ಜಗಳೂರು, ನ.21- ಪಟ್ಟಣದ ತಾಲೂಕು ಕಛೇರಿಯಲ್ಲಿ ನಡೆದ ಕನ್ನಡ ಸಾಹಿತ್ಯ ಪರಿಷತ್ ರಾಜ್ಯಾಧ್ಯಕ್ಷ ಹಾಗೂ ಜಿಲ್ಲಾಧ್ಯಕ್ಷ ಮತ್ತು ಗಡಿ ರಾಜ್ಯಾಧ್ಯಕ್ಷ ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ತಾಲ್ಲೂಕಿನ ಒಟ್ಟು 1275 ಮತದಾರರಲ್ಲಿ 588 (ಶೇ.49)ಮತದಾರರು ಹಕ್ಕು ಚಲಾಯಿಸಿದರು. ಮತದಾನ ಪ್ರಕ್ರಿಯೆ ಬೆಳಿಗ್ಗೆ 8ರಿಂದ ಸಂಜೆ 4 ಗಂಟೆಯವರೆಗೆ ಶಾಂತಿಯುತವಾಗಿ ನಡೆಯಿತು.

ಜಿಲ್ಲಾಧ್ಯಕ್ಷ ಸ್ಥಾನದ ವಾಮದೇವಪ್ಪ ಅವರಿಗೆ 261 ಮತ್ತು ಶಿವಕುಮಾರಸ್ವಾಮಿ ಕುರ್ಕಿ ಅವರಿಗೆ 287 ಮತಗಳು ಬಂದಿವೆ. 40 ಮತಗಳು ತಿರಸ್ಕೃತವಾಗಿವೆ.

## ಜಗಳೂರು: ರಸ್ತೆ ಅಪಘಾತದಲ್ಲಿ ಸಾವು

ಜಗಳೂರು, ನ.21- ಟಿಪ್ಪರ್ ಲಾರಿ ಚಾಲಕನ ನಿರ್ಲಕ್ಷ್ಯದಿಂದ ಹಿಂಬದಿಯಿಂದ ಚಲಾಯಿಸಿ ಕಾರಿಗೆ ಗುದ್ದಿ, ಬೈಕ್ ಡಿಕ್ಕಿ ಹೊಡೆದು ಅಶೋಕ್ ಲೈಲ್ಯಾಂಡ್ ವಾಹನಕ್ಕೆ ಡಿಕ್ಕಿ ಹೊಡೆದು ಸರಣಿ ಅಪಘಾತ ಸಂಭವಿಸಿರುವ ಘಟನೆ ಜಗಳೂರು ಪಟ್ಟಣದ ಮಹಾತ್ಮಗಾಂಧಿ ವೃತ್ತದ ಹಳೆ ಬಸ್ ನಿಲ್ದಾಣದ ಬಳಿ ಭಾನುವಾರ ರಾತ್ರಿ ಸಂಭವಿಸಿದೆ.

ಈ ಘಟನೆಯಲ್ಲಿ ಬೈಕ್ ಸವಾರ ವೀರೇಶ್ ಮೃತ ಪಟ್ಟಿದ್ದಾರೆ. ಪ್ರಕರಣ ದಾಖಲಾಗಿದೆ.

## ಕೆರೆಯ ಪಾಲಾಗಿದ್ದ ವ್ಯಕ್ತಿಯ ಶವ ಪತ್ತೆ



ದಾವಣಗೆರೆ, ನ.21- ಎಮ್ಮೆ ತೊಳೆಯಲು ಹೋಗಿ ಕೆರೆಯ ಪಾಲಾಗಿದ್ದ ವ್ಯಕ್ತಿಯೊಬ್ಬನ ಮೃತದೇಹ ಭಾನುವಾರ ಮಧ್ಯಾಹ್ನ ಪತ್ತೆಯಾಗಿದೆ.

ತಾಲೂಕಿನ ಹೆದ್ನೆ ಗ್ರಾಮದ ತಿಪ್ಪೇಸ್ವಾಮಿ (40) ಎಂಬುವರ ಪತ್ತೆಯಾದ ಮೃತದೇಹ. ಕಳೆದ ಎರಡು ದಿನದ ಹಿಂದೆ ತಾಲ್ಲೂಕಿನ ರಾಂಪುರ ಗ್ರಾಮದ ಕೆರೆಯಲ್ಲಿ ಎಮ್ಮೆ ಮೈ ತೊಳೆಯಲು ಹೋದಾಗ ನೀರು ಪಾಲಾಗಿದ್ದರು.

ಎರಡು ದಿನದಿಂದ ಗ್ರಾಮದ ಕೆಲವು ಈಜುಗಾರರು ಕೆರೆಯಲ್ಲಿ ಹುಡುಕಾಡಿದರೂ ಮೃತದೇಹ ಪತ್ತೆಯಾಗಿರಲಿಲ್ಲ. ಜಿ.ಪಂ. ಮಾಜಿ ಸದಸ್ಯ ಬಸವಂತಪ್ಪ ಹರಿಹರದ ನುರಿತ ಈಜುಗಾರರನ್ನು ಕರೆದೊಯ್ದು ಭಾನುವಾರ ಮೃತದೇಹವನ್ನು ಪತ್ತೆ ಹಚ್ಚಿಸಿದರು. ಬಳಿಕ ಮೃತ ಕುಟುಂಬದ ಸದಸ್ಯರಿಗೆ ಸಾಂತ್ವನ ಹೇಳಿದರು. ಈ ಕುರಿತು ಮಾಯಕೊಂಡ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಮಲೇಬೆನ್ನೂರಿನಲ್ಲಿ 44 ರಷ್ಟು ಮತದಾನ



ಮಲೇಬೆನ್ನೂರು, ನ.21- ಇಲ್ಲಿನ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಸ್ಥಾಪಿಸಿದ್ದ ಮತಗಟ್ಟೆಯಲ್ಲಿ ನಡೆದ ಕನ್ನಡ ಸಾಹಿತ್ಯ ಪರಿಷತ್ತಿನ ಚುನಾವಣೆಯಲ್ಲಿ ನೀರಸ ಮತದಾನ ನಡೆಯಿತು. 687 ಮತದಾರರ ಪೈಕಿ 303 ಮತದಾರರು ಮಾತ್ರ ಮತದಾನ ಮಾಡಿದ್ದಾರೆ.

ಹಿರಿಯ ಮುಖಂಡ ಹೊಳೆಸಿರಿಗೆರೆ ನಾಗನಗೌಡ್ರು, ಜಿ.ಪಂ. ಮಾಜಿ ಸದಸ್ಯರಾದ ಬೆಣ್ಣೆಹಳ್ಳಿ ಹಾಲೇಶಪ್ಪ, ಬಿ.ಎಂ. ವಾಗೀಶ್‌ಸ್ವಾಮಿ, ಎಪಿಎಂಸಿ ಅಧ್ಯಕ್ಷ ಜಿ. ಮಂಜುನಾಥ್ ಪಟೇಲ್, ಡಿಸಿಸಿ ಬ್ಯಾಂಕಿನ ಮಾಜಿ ಉಪಾಧ್ಯಕ್ಷ ಜಿಗಳಿ ಅನಂದಪ್ಪ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಬಿ. ಅಬೀದ್ ಅಲಿ, ಜಿಲ್ಲಾ ಜೆಡಿಎಸ್ ಅಧ್ಯಕ್ಷ ಬಂಡೇರ ತಿಮ್ಮಣ್ಣ, ತಾ, ಗ್ರಾ. ಬಿಜೆಪಿ ಮಾಜಿ ಅಧ್ಯಕ್ಷ ಕೆ.ಹೆಚ್. ನಾಗನಗೌಡ, ಶಿವ ವಿವಿಧೋದ್ದೇಶ ಸಹಕಾರ ಸಂಘದ ಅಧ್ಯಕ್ಷ ಡಾ. ಬಿ.ಆರ್. ಚಂದ್ರಶೇಖರ್, ತಾ. ಪ್ರಾ. ಶಾ. ಶಿಕ್ಷಕರ ಸಂಘದ ಕಾರ್ಯದರ್ಶಿ ಶರಣಕುಮಾರ್ ಹೆಗಡೆ, ಸಾಹಿತಿ ಕುಂದೂರು ಮಂಜಪ್ಪ, ಮಲೇಬೆನ್ನೂರು ಪಿಎಸಿಎಸ್ ಅಧ್ಯಕ್ಷ ಪಿ.ಆರ್. ಕುಮಾರ್, ಕಮಲಾಪುರದ ಮಹಾಂತೇಶ್, ದಿಶಾ ಸಮಿತಿ ಸದಸ್ಯ ಐರಣಿ ಅಣ್ಣಪ್ಪ, ಕನ್ನಡ ಸಂಘದ ಜ್ಯೋತಿ ನಾಗಭೂಷಣ್, ಗ್ರಾ.ಪಂ. ಮಾಜಿ ಅಧ್ಯಕ್ಷ ಭೋವಿ ಕುಮಾರ್, ಪುರಸಭೆ ಮಾಜಿ ಸದಸ್ಯ ಎ. ಆರೀಫ್ ಅಲಿ, ಲಯನ್ಸ್ ಕ್ಲಬ್ ಮಾಜಿ ಅಧ್ಯಕ್ಷ ಓ.ಜಿ. ರುದ್ರಗೌಡ್ರು, ಕಿಸಾನ್ ಕಾಂಗ್ರೆಸ್ ಅಧ್ಯಕ್ಷ ಕುಂಬಳೂರು ವಾಸು, ಪಿ.ಹೆಚ್. ಶಿವಕುಮಾರ್, ಮೆಡಿಕಲ್ ಷಾಪ್‌ನ ಎನ್.ಕೆ. ರಾಜೀವ್, ಪತ್ರಕರ್ತರಾದ ಜಿಗಳಿ ಪ್ರಕಾಶ್, ವಾಸವಿ ರಮೇಶ್, ಸದಾನಂದ್ ಮತ್ತು ಇತರರು ಮತದಾನ ಮಾಡಿದರು.

ಚುನಾವಣೆ ನಂತರ ನಡೆದ ಮತ ಎಣಿಕೆಯಲ್ಲಿ ಜಿಲ್ಲಾ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದ ಬಿ. ವಾಮದೇವಪ್ಪ ಅವರಿಗೆ 260 ಮತ್ತು ಶಿವಕುಮಾರ್ ಕುರ್ಕಿಗೆ 39 ಮತಗಳು ಲಭಿಸಿದವು. 4 ಮತಗಳು ತಿರಸ್ಕೃತವಾಗಿವೆ.

ರಾಜ್ಯ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದ ಶೇಖರಗೌಡ ಮಾಲಿ ಪಾಟೀಲ್‌ಗೆ 180, ಮಹೇಶ್ ಜೋಷಿಗೆ 67, ರಾಜಶೇಖರ್ ಮುಲಾಲಿಗೆ 14 ಮತಗಳು ಲಭಿಸಿವೆ.

ಮತಗಟ್ಟೆ ಅಧಿಕಾರಿಯಾಗಿ ಉಪ ತಹಶೀಲ್ದಾರ್ ಆರ್. ರವಿ, ಸಹಾಯಕ ಅಧಿಕಾರಿ ಮಾಗಿ ಹನುಮಗೌಡ ಗ್ರಾಮ ಲೆಕ್ಕಾಧಿಕಾರಿ ದೇವರಾಜ್, ಮತಗಟ್ಟೆ ಅಧಿಕಾರಿಗಳಾದ ಗ್ರಾಮ ಲೆಕ್ಕಾಧಿಕಾರಿಗಳಾದ ಅಣ್ಣಪ್ಪ ಸುಭಾನಿ, ಕೊಟ್ರೇಶ್ ಕಾರ್ಯ ನಿರ್ವಹಿಸಿದರು.

# ರೈತ ಸಂಘಟನೆಗಳಿಂದ ಆರು ಬೇಡಿಕೆಗಳ ಮಾತುಕತೆ ಮುಂದುವರೆಸದಿದ್ದರೆ ಹೋರಾಟ ನಡೆಸುವ ಸೂಚನೆ

ನವದೆಹಲಿ, ನ.21 – ದೆಹಲಿಯಲ್ಲಿ ಪ್ರತಿಭಟನೆ ನಡೆಸುತ್ತಿರುವ ರೈತ ಸಂಘಟನೆಗಳ ಒಕ್ಕೂಟವಾದ ಸಂಯುಕ್ತ ಕಿಸಾನ್ ಮೋರ್ಚಾ, ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರಿಗೆ ಕನಿಷ್ಠ ಬೆಂಬಲ ಬೆಲೆಗೆ ಶಾಸನಾತ್ಮಕ ಬೆಂಬಲ ಸೇರಿದಂತೆ ಆರು ಬೇಡಿಕೆಗಳ ಪತ್ರ ಕಳಿಸಿದೆ.

ಮೂರು ಕೃಷಿ ಕಾಯ್ದೆಗಳನ್ನು ವಾಪಸ್ ಪಡೆದರೂ ಸಹ, ಕನಿಷ್ಠ ಬೆಂಬಲ ಬೆಲೆಗೆ ಶಾಸನಾತ್ಮಕ ಬೆಂಬಲ, ವಿದ್ಯುತ್ ತಿದ್ದುಪಡಿ ಕಾಯ್ದೆ ವಾಪಸ್ಸಾತಿಯಂತಹ ಬೇಡಿಕೆಗಳನ್ನು ಈಡೇರಿಸುವವರೆಗೂ ಹೋರಾಟ ಮುಂದುವರೆಸಲಾಗುವುದು ಎಂದು ಒಕ್ಕೂಟ ಇಂಗಿತ ವ್ಯಕ್ತಪಡಿಸಿದೆ.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಮೂರು ಕೃಷಿ ಕಾಯ್ದೆಗಳನ್ನು ವಾಪಸ್ ಪಡೆಯುವುದಾಗಿ ತಿಳಿಸಿದ್ದಾರೆ. ಸಂಸತ್ತಿನಲ್ಲಿ ಕಾಯ್ದೆಗಳನ್ನು ವಾಪಸ್ ಪಡೆಯುವವರೆಗೂ ಹೋರಾಟ ಮುಂದುವರೆಸಲಾಗುವುದು ಎಂದು ಒಕ್ಕೂಟ ಹೇಳಿದೆ.

ಆರು ಬೇಡಿಕೆಗಳ ಈಡೇರಿಕೆಗಾಗಿ ಸರ್ಕಾರ ಮಾತುಕತೆಗೆ ಬರಬೇಕು. ಸರ್ಕಾರ ಮಾತುಕತೆಗೆ ಬರುವವರೆಗೂ ಹೋರಾಟ ನಿಲ್ಲಿಸುವುದಿಲ್ಲ ಎಂದು ಒಕ್ಕೂಟ ತಿಳಿಸಿದೆ.

ರೈತರ ವಿರುದ್ಧ ದಾಖಲಿಸಿದ ಪ್ರಕರಣಗಳನ್ನು ವಾಪಸ್ ಪಡೆಯಬೇಕು, ಪ್ರತಿಭಟನೆಯಲ್ಲಿ ಮೃತರಿಗಾಗಿ ಸ್ಮಾರಕ ನಿರ್ಮಿಸಬೇಕು ಎಂದೂ ಮೋರ್ಚಾ ಒತ್ತಾಯಿಸಿದೆ.

ಎಲ್ಲಾ ರೈತರಿಗೆ ಹಾಗೂ ಎಲ್ಲಾ ಕೃಷಿ ಉತ್ಪನ್ನಗಳಿಗೆ ಶಾಸನಾತ್ಮಕವಾಗಿ ಬೆಂಬಲ ಬೆಲೆ ನಿಗದಿ ಪಡಿಸಬೇಕು. ಪ್ರತಿಯೊಬ್ಬ ರೈತನಿಗೂ ಇಡೀ ಬೆಳೆಗೆ ಕನಿಷ್ಠ ಬೆಂಬಲ ಬೆಲೆ ಸಿಗಬೇಕು. ವಿದ್ಯುತ್ ತಿದ್ದುಪಡಿ ಮಸೂದೆಯ ಕರಡು ವಾಪಸ್ ಪಡೆಯಬೇಕು ಎಂದು ಒತ್ತಾಯಿಸಲಾಗಿದೆ.

ರಾಜಧಾನಿ ದೆಹಲಿಯ ವಾಯು ಗುಣಮಟ್ಟ ನಿಯಂತ್ರಣ ಕಾಯ್ದೆಯಲ್ಲಿ ರೈತರ ವಿರುದ್ಧದ ಅಂಶಗಳನ್ನು ತೆಗೆದು ಹಾಕಬೇಕು ಎಂದೂ ಕೇಳಲಾಗಿದೆ.

ಕೇಂದ್ರ ಗೃಹ ಖಾತೆ ಅಧೀನ ಸಚಿವ ಅಜಯ್ ಮಿಶ್ರ ಅವರನ್ನು ವಜಾಗೊಳಿಸಿ ಬಂಧಿಸಬೇಕು ಎಂದು ಆಗ್ರಹಿಸಲಾಗಿದೆ. ಲಖೀಂಪುರ ಖೇರಿ ಹಿಂಸಾಚಾರ ಪ್ರಕರಣದಲ್ಲಿ ಮಿಶ್ರ ಪುತ್ರನನ್ನು ಬಂಧಿಸಲಾಗಿದೆ. ಪ್ರತಿಭಟನೆಯಲ್ಲಿ ಸಾವನ್ನಪ್ಪಿದ 700 ರೈತ ಕುಟುಂಬಗಳಿಗೆ ಪರಿಹಾರ ಹಾಗೂ ಪುನರ್ವಸತಿ ಕಲ್ಪಿಸಬೇಕು ಎಂಬ ಬೇಡಿಕೆ ಇಡಲಾಗಿದೆ.

ಪತ್ರದಲ್ಲಿ ಬರೆಯಲಾಗಿರುವ ಆರು ಬೇಡಿಕೆಗಳನ್ನು ಈಡೇರಿಸುವ ಬಗ್ಗೆ ಮಾತುಕತೆ ಮುಂದುವರೆಸುವವರೆಗೆ ಪ್ರತಿಭಟನೆ ಮುಂದುವರೆಯಲಿದೆ ಎಂದು ಒಕ್ಕೂಟ ಎಚ್ಚರಿಸಿದೆ.

# ಸತತ ಲಾಭದಾಯಕದಲ್ಲಿ ಜಿ.ಎಂ. ಸೌಹಾರ್ದ ಪತ್ತಿನ ಸಹಕಾರಿ



## ಸಂಘದ ವಾರ್ಷಿಕ ಮಹಾಸಭೆಯಲ್ಲಿ ಅಧ್ಯಕ್ಷ ಜಿ.ಎಂ. ಪ್ರಸನ್ನ ಕುಮಾರ್

ದಾವಣಗೆರೆ, ನ.21- ನಗರದ ಜಿ.ಎಂ. ಸೌಹಾರ್ದ ಪತ್ತಿನ ಸಹಕಾರಿ ನಿಯಮಿತದ ವಾರ್ಷಿಕ ಮಹಾಸಭೆಯು ವಿಡಿಯೋ ಕಾನ್ಫರೆನ್ಸ್ ಮೂಲಕ ಇಂದು ನಡೆಯಿತು.

ಸಭೆಯನ್ನು ಉದ್ಘಾಟಿಸಿದ ಸಂಘದ ಅಧ್ಯಕ್ಷ ಜಿ.ಎಂ. ಪ್ರಸನ್ನಕುಮಾರ್ ಅಧ್ಯಕ್ಷತೆ ವಹಿಸಿದ್ದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು, ಈ ಸಂಘವು ಪ್ರತಿ ವರ್ಷವೂ ವ್ಯವಹಾರದಲ್ಲಿ ಅಭಿವೃದ್ಧಿ ಹೊಂದುತ್ತಾ 2020-21 ನೇ ಸಾಲಿನಲ್ಲಿ 7.26 ಕೋಟಿ ರೂ ಷೇರು ಬಂಡವಾಳ, 142.30 ಕೋಟಿ ಠೇವಣಿ ಸಂಗ್ರಹಿಸಿ, 2.30 ಕೋಟಿ ಲಾಭ ಗಳಿಸುವತ್ತ ದಾಪುಗಾಲು ಹಾಕಿದೆ ಎಂದು ಹರ್ಷ ವ್ಯಕ್ತಪಡಿಸಿದರು.

ನಮ್ಮ ಸಹಕಾರಿಯು ಮುಂಬರುವ ದಿನಗಳಲ್ಲಿ ಸದಸ್ಯರಿಗೆ ಎಸ್‌ಎಂಎಸ್ ಅಲರ್ಟ್, ಮೊಬೈಲ್ ಬ್ಯಾಂಕಿಂಗ್, ನೆಫ್ಟ್, ಆರ್‌ಟಿಜಿಎಸ್, ಸಬಲೀಕರಣಗೊಳಿಸುವ ಸೌಲಭ್ಯಗಳನ್ನು ನೀಡಲಿದೆ. ಈಗಾಗಲೇ ಸಿಬಿಎಸ್ ವ್ಯವಸ್ಥೆ ಅಳವಡಿಸಿದೆ. ಇನ್ನೆರಡು ವರ್ಷಗಳಲ್ಲಿ 200 ಕೋಟಿ ಠೇವಣಿ ಸಂಗ್ರಹಿಸುವ ಗುರಿ ಹೊಂದಿದೆ ಎಂದು ವಿವರಿಸಿದರು.

ಶ್ರೀಮತಿ ಯಶೋಧಮ್ಮ, ಕು. ಜಿ.ಪಿ. ಕವಿತಾ, ಶ್ರೀಮತಿ ಶೃತಿ, ಕು. ನಾಗಶ್ರೀ ಪ್ರಾರ್ಥಿಸಿದರು. ಸಹಕಾರಿಯ ವಿಷಯ ಸಲಹೆಗಾರ ಎಸ್.ಸಿ. ಮಹಾರುದ್ರಪ್ಪ ಸ್ವಾಗತಿಸಿದರು. ನಿರ್ದೇಶಕ ಕೆ.ಎನ್. ಗುರುಮೂರ್ತಿ ವಂದಿಸಿದರು. ಹಿರಿಯ ನಿರ್ದೇಶಕ ಬಿ.ಆರ್. ನೀಲಕಂಠಪ್ಪ ಅವರು ನಿರ್ದೇಶಕರು ಪಡೆದಿರುವ ಸಾಲಗಳ ಬಳಕೆ ಕುರಿತು ವರದಿ ಮಂಡಿಸಿದರು.

ಯುವ ನಿರ್ದೇಶಕ ಜಿ.ಎಸ್ ಅನಿತ್ ಕುಮಾರ್ ಅವರು, ಸಹಕಾರಿಯು ನಡೆದ ಬಂದ ದಾರಿ ಬಗ್ಗೆ ಸದಸ್ಯರಿಗೆ ಮನವರಿಕೆ ಮಾಡಿಕೊಟ್ಟರು. ಪ್ರಧಾನ ವ್ಯವಸ್ಥಾಪಕ ಎಸ್.ಎಸ್. ಮಲ್ಲಪ್ಪ ಅವರು ಸಹಕಾರಿಯ ಆಡಳಿತ ವರದಿ ಮಂಡಿಸಿದರು. ಉಪ ಪ್ರಧಾನ ವ್ಯವಸ್ಥಾಪಕ ಐ.ಬಿ. ಕಡದಕಟ್ಟೆ ಅವರು ಲಾಭ ಹಂಚಿಕೆ ಕುರಿತು ವರದಿ ವಾಚಿಸಿದರು. ಸಹಕಾರಿ ಮುಖ್ಯ ಪ್ರವರ್ತಕ ಜಿ.ಎಂ ಲಿಂಗರಾಜು ಸಭೆಯಲ್ಲಿ ಉಪಸ್ಥಿತರಿದ್ದರು.

ಸಭೆಯಲ್ಲಿ ಮಹಿಳಾ ನಿರ್ದೇಶಕರಾದ ಶ್ರೀಮತಿ ಗಾಯತ್ರಿ ಸುಭಾಶ್ಚಂದ್ರ ಅವರು ಹಾಜರಿದ್ದರು. ನಿರ್ದೇಶಕರುಗಳಾದ ಎ.ಸಿ ಬಸವರಾಜ್, ಎ.ಎಸ್ ಗುರುಮೂರ್ತಿ, ಸಿದ್ದನಗೌಡ, ಸಿ ಪಾಟೀಲ್, ಕೆ.ಎಸ್. ವಿಜಯಕುಮಾರ್, ಎ.ಬಿ. ರವೀಂದ್ರನಾಥ್ ಹಾಜರಿದ್ದರು. ಸಹಕಾರಿಯ ಸಾಲಗಾರರ ಸಮಿತಿ ಸದಸ್ಯ ಸುರೇಶ್‌ಬಾಬು ಚಿತ್ರದುರ್ಗ ಬಿ. ಚನ್ನಬಸಪ್ಪ ಎ.ಆರ್.ಎಸ್. ಶಿವಮೊಗ್ಗ ಹಾಗೂ ಕಾನೂನು ಸಲಹೆಗಾರರಾದ ಎಂ.ಪಿ. ಚಂದನ್ ಪಟೇಲ್ ಅವರುಗಳು ಹಾಜರಿದ್ದರು.

ಜಿಎಂಐಟಿ ಕಾಲೇಜಿನ ಆಡಳಿತ ಅಧಿಕಾರಿ ಸುಭಾಶ್ಚಂದ್ರ, ಪ್ರಾಂಶುಪಾಲ ವೈ. ವಿಜಯ್‌ಕುಮಾರ್ ಇತರರು ಹಾಜರಿದ್ದರು.

# ಮಳೆಯಿಂದ ಆಂಧ್ರಪ್ರದೇಶದ ಹೆದ್ದಾರಿಗಳಲ್ಲಿ ಜನ ಅತಂತ್ರ

ಅಮರಾವತಿ, ನ. 21 – ಆಂಧ್ರಪ್ರದೇಶದಲ್ಲಿ ಸುರಿದ ಧಾರಾಕಾರ ಮಳೆಯಿಂದಾಗಿ ಹೆದ್ದಾರಿಗಳಲ್ಲಿ ಸಂಚಾರ ಕಷ್ಟವಾಗಿದ್ದು, ಜನರು ಅತಂತ್ರರಾಗಿದ್ದಾರೆ. 100ಕ್ಕೂ ಹೆಚ್ಚು ರೈಲುಗಳನ್ನು ರದ್ದುಗೊಳಿಸಲಾಗಿದೆ. ಮಳೆ ಸಂಬಂಧದ ಘಟನೆಗಳಿದಾಗಿ ಆಂಧ್ರದಲ್ಲಿ ಸಾವನ್ನಪ್ಪಿದವರ ಸಂಖ್ಯೆ 31ಕ್ಕೆ ತಲುಪಿದೆ. ಚೆನ್ನೈ - ಕೊಲ್ಕೊತಾ ರಾಷ್ಟ್ರೀಯ ಹೆದ್ದಾರಿ - 16 ನೆಲ್ಲೂರು ಹಾಗೂ ವಿಜಯವಾಡಗಳ ನಡುವೆ ಬಂದ್ ಆಗಿದೆ. ಇದರಿಂದಾಗಿ ದೇಶದ ಪ್ರಮುಖ ಮಾರ್ಗದಲ್ಲಿ ಸಂಚಾರಕ್ಕೆ ಸಮಸ್ಯೆಯಾಗಿದೆ.

ರೈಲ್ವೆ ಹಳಿಗಳಿಗೆ ನೆಲ್ಲೂರು ಬಳಿ ಹಾನಿಯಾಗಿರುವುದರಿಂದ 100 ಎಕ್ಸ್‌ಪ್ರೆಸ್ ರೈಲುಗಳನ್ನು ರದ್ದುಗೊಳಿಸಲಾಗಿದೆ. 29 ರೈಲುಗಳ ಮಾರ್ಗ ಬದಲಿಸಲಾಗಿದೆ. ಎಸ್.ಪಿ.ಎಸ್. ನೆಲ್ಲೂರಿನಲ್ಲಿರುವ ಸೋಮಶಿಲ ಜಲಾ ಶಯದಿಂದ 2 ಲಕ್ಷ ಕ್ಯೂಸೆಕ್ಸ್ ನೀರು ಹೊರ ಬಿಡಲಾಗಿದೆ. ಇದರಿಂದಾಗಿ ರಾಷ್ಟ್ರೀಯ ಹೆದ್ದಾರಿ -16 ಕೊವುರು ಬಳಿ ಕೊಚ್ಚಿ ಹೋಗಿದೆ.

ಇದರಿಂದಾಗಿ ನೆಲ್ಲೂರು ಹಾಗೂ ವಿಜಯವಾಡದ ನಡುವಿನ ಸಂಚಾರ ಸ್ಥಗಿತಗೊಳಿಸಲಾಗಿದೆ. ನೂರಾರು ವಾಹನಗಳು ಹೆದ್ದಾರಿಯ ಎರಡೂ ಕಡೆ ಅತಂತ್ರವಾಗಿವೆ.

# ಬೆಂಬಲ ಬೆಲೆಯತ್ತ ರೈತರ ಚಿತ್ತ

**(1ನೇ ಪುಟದಿಂದ)** ನಿಲ್ಲಿಸುವುದಿಲ್ಲ ಹಾಗೂ ಅವರು ಹೆಚ್ಚಿನ ಬೇಡಿಕೆಗಳೊಂದಿಗೆ ಸರ್ಕಾರವನ್ನು ಬೆದರಿಸಲಿದ್ದಾರೆ ಎಂದು ಸ್ಥಳೀಯ ಸತೇರಿಯ ನಿವಾಸಿ ಸುನಿಲ್ ಕಾಜಿ ಹೇಳಿದ್ದಾರೆ. ಆದರೂ, ಸರ್ಕಾರದ ಘೋಷಣೆಯಿಂದ ಬಿಜೆಪಿಯ ನಂಬಿಕಾರ್ಹತೆ ಈ ಪ್ರದೇಶದಲ್ಲಿ ಹೆಚ್ಚಾಗಬಹುದು. ಇದು 2022ರ ವಿಧಾನಸಭಾ ಚುನಾವಣೆ ಹಾಗೂ 2024ರ ಸಾರ್ವತ್ರಿಕ ಚುನಾವಣೆಯಲ್ಲಿ ನೆರವಾಗಬಹುದು ಎಂದು ಹೇಳಿದ್ದಾರೆ.

ಜಾಟ್ ಇತಿಹಾಸದ ಕುರಿತು ಪುಸ್ತಕ ಬರೆದಿರುವ ಅಮಿತ್ ಕುಮಾರ್ ಅವರು, ಸರ್ಕಾರದ ನಿರ್ಧಾರ ಸ್ವಲ್ಪ ತಡವಾಯಿತು. ರಾಜಕೀಯ ವಾತಾವರಣ ಗಮನಿಸಿದಾಗ ಬಿಜೆಪಿಗೆ ಚುನಾವಣೆಯಲ್ಲಿ ಹೊಡೆತ ಬಿದ್ದಿದೆ ಎಂದು ಹೇಳಿದ್ದಾರೆ.

# ಕರಾಳ ಕೃಷಿ ಮಸೂದೆಗಳ ವಾಪಸ್ ಸ್ವಾಗತಾರ್ಹ

ದಾವಣಗೆರೆ, ನ.21- ದೇಶದ ರೈತರ ಮೇಲೆ ವಿಧಿಸಿದ್ದ ಮೂರು ಕರಾಳ ಕೃಷಿ ಮಸೂದೆಗಳನ್ನು ವಾಪಸ್ ಪಡೆದಿರುವ ಕೇಂದ್ರ ಸರ್ಕಾರದ ನಿರ್ಧಾರವನ್ನು ಜಿಲ್ಲಾ ಜೆಡಿಎಸ್ ಕಾರ್ಯಾಧ್ಯಕ್ಷ ಗಣೇಶ್ ದಾಸಕರಿಯಪ್ಪ ಸ್ವಾಗತಿಸಿದ್ದಾರೆ.



**ಜೆಡಿಎಸ್ ಕಾರ್ಯಾಧ್ಯಕ್ಷ ಗಣೇಶ್ ದಾಸಕರಿಯಪ್ಪ**

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ದೇಶದ ರೈತರು ಸತತ 16 ತಿಂಗಳ ಕಾಲ ಮನೆ - ಮಠ ತೊರೆದು ಚಳಿ, ಮಳೆ, ಬಿಸಿಲನ್ನೂ ಲೆಕ್ಕಿಸದೇ ದೆಹಲಿಯಲ್ಲಿ ನಡೆಸಿದ ಹೋರಾಟಕ್ಕೆ ಕೊನೆಗೂ ಜಯ ದೊರೆತಿದೆ ಎಂದು ಅವರು ತಿಳಿಸಿದ್ದಾರೆ.

ರೈತರ ಹೋರಾಟಕ್ಕೆ ದೇಶದ ಎಲ್ಲಾ ರಾಜ್ಯಗಳ ವಿರೋಧ ಪಕ್ಷದವರು ಬೆಂಬಲವನ್ನು ನೀಡಿದ್ದರು. ಈ ಹೋರಾಟದ ಮುಂಚೂಣಿಯಲ್ಲಿದ್ದ ಪಂಜಾಬ್, ಹರಿಯಾಣ ರಾಜ್ಯಗಳ ರೈತರುಗಳಿಗೆ ಈ ಕೀರ್ತಿ ಸಲ್ಲುತ್ತದೆ.

ಶೀಘ್ರದಲ್ಲೇ ಬರಲಿರುವ ಪಂಜಾಬ್, ಹರಿಯಾಣ ಸೇರಿದಂತೆ ಪಂಚ ರಾಜ್ಯಗಳ ವಿಧಾನಸಭಾ ಚುನಾವಣೆಯಲ್ಲಿ ಅಧಿಕಾರ ಕೈ ತಪ್ಪುವ ಭೀತಿ ಮತ್ತು ಈಗಾಗಲೇ ದೇಶದ ಕೆಲ ರಾಜ್ಯಗಳಲ್ಲಿ ನಡೆದ ಉಪ ಚುನಾವಣೆಗಳಲ್ಲಿ ಮತದಾರರು ನೀಡಿದ ತೀರ್ಪಿನಿಂದ ಬೆದರಿ ಕೇಂದ್ರ ಸರ್ಕಾರ ಕಾಯಿದೆಗಳನ್ನು ಹಿಂಪಡೆದಿದೆ. ಇದಕ್ಕೂ ಮೊದಲೇ ಸರ್ಕಾರ ಈ ನಿರ್ಧಾರ ಕೈಗೊಳ್ಳಬಹುದಿತ್ತು ಎಂದು ಅವರು ತಿಳಿಸಿದ್ದಾರೆ.

ಕಾಯಿದೆಗಳನ್ನು ವಿರೋಧಿಸಿ, ದೇಶದ ಎಲ್ಲಾ ರಾಜ್ಯಗಳ ರೈತರು ಛಲ ಬಿಡದೇ ನಡೆಸಿದ ಉಪವಾಸ ಸತ್ಯಾಗ್ರಹ, ಬಲಿದಾನಗಳ ಮೂಲಕ ರೈತರ ಹಕ್ಕನ್ನು ಪಡೆದು ಕೊಳ್ಳಬಹುದು ಎಂಬುದನ್ನು ಈ ಹೋರಾಟ ತೋರಿಸಿಕೊಟ್ಟಿದೆ ಈ ದಿನ ದೇಶದ ಇತಿಹಾಸದ ಪುಟಗಳಲ್ಲಿ ಶಾಶ್ವತವಾಗಿ ಉಳಿಯತ್ತದೆ ಎಂದು ಗಣೇಶ್ ದಾಸಕರಿಯಪ್ಪ ತಿಳಿಸಿದ್ದಾರೆ.

# ಕಸಾಪ ಅಧ್ಯಕ್ಷ ವಾಮದೇವಪ್ಪಗೆ ಅಣಬೇರು ರಾಜಣ್ಣ ಅಭಿನಂದನೆ

ದಾವಣಗೆರೆ, ನ.21- ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾಗಿ ಅತ್ಯಧಿಕ ಮತಗಳನ್ನು ಪಡೆದು ಆಯ್ಕೆಯಾಗಿರುವ ಬಿ. ವಾಮದೇವಪ್ಪ ಅವರನ್ನು ನಗರದ ಅಪೂರ್ವ ಹೋಟೆಲ್ಸ್ ಗ್ರೂಪ್ ಮಾಲೀಕರೂ, ಹಿರಿಯ ಹೋಟೆಲ್ ಉದ್ಯಮಿ ಅಣಬೇರು ರಾಜಣ್ಣ ಅಭಿನಂದಿಸಿದ್ದಾರೆ.

# ಕಾಂಗ್ರೆಸ್‌ನಿಂದ ಕನಕದಾಸರ ಜಯಂತಿ

ಜಿಲ್ಲಾ ಕಾಂಗ್ರೆಸ್ ವತಿಯಿಂದ ಕನಕದಾಸರ ಜನ್ಮದಿನಾಚರಣೆಯು ಇಂದು ಬೆಳಿಗ್ಗೆ 11-30 ಕ್ಕೆ ಕಾಂಗ್ರೆಸ್ ಕಚೇರಿಯಲ್ಲಿ ನಡೆಯಲಿದೆ. ವಿಧಾನ ಪರಿಷತ್ ಕಾಂಗ್ರೆಸ್ ಅಭ್ಯರ್ಥಿ ಸೋಮಶೇಖರ್ ಬಿ. ಮೋಟಗನಹಳ್ಳಿ ಭಾಗವಹಿಸುವರು.

# ಲಸಿಕೆ ಪಡೆದವರಿಗೆ ಬಹುಮಾನ

**(1ನೇ ಪುಟದಿಂದ)** ಪ್ರಯಾಣದ ಪಾಸ್, ನಗದು ಬಹುಮಾನಗಳನ್ನು ಉತ್ತೇಜನದ ರೂಪದಲ್ಲಿ ನೀಡಲಾಗುವುದು ಎಂದು ಮೂಲಗಳು ತಿಳಿಸಿವೆ. ದೇಶದ ಶೇ.82ರಷ್ಟು ಜನರು ಮೊದಲ ಡೋಸ್ ಲಸಿಕೆ ಪಡೆದಿದ್ದಾರೆ. ಶೇ.43ರಷ್ಟು ಜನರು 2 ಡೋಸ್ ಲಸಿಕೆ ಪಡೆದಿದ್ದಾರೆ. 12 ಕೋಟಿ ಜನರು ಅವಧಿ ಮೀರಿದ್ದರೂ 2ನೇ ಡೋಸ್ ಪಡೆದಿಲ್ಲ.

# ಕೊರೊನಾ ಲಸಿಕೆ ಪೂರೈಕೆ ಹೆಚ್ಚಳ ಸಂಗ್ರಹಕ್ಕೂ ಜಾಗವಿಲ್ಲ

**(1ನೇ ಪುಟದಿಂದ)** ಯುನಿಸೆಫ್‌ಗೆ ಎಸ್.ಐ.ಐ. ಹಲವಾರು ಜೀವರಕ್ಷಕ ಲಸಿಕೆಗಳನ್ನು ಉತ್ಪಾದಿಸುತ್ತಿದೆ. ಕೋವಿಶೀಲ್ಡ್ ಸಂಗ್ರಹ ಹೆಚ್ಚಾಗಿರುವುದರಿಂದ, ಉಳಿದ ಜೀವರಕ್ಷಕ ಲಸಿಕೆಗಳನ್ನು ಸಂಗ್ರಹಿಸುವುದಕ್ಕೆ ಸಮಸ್ಯೆಯಾಗುತ್ತಿದೆ.

ನಮ್ಮ ದೇಶೀಯ ಹಾಗೂ ಜಾಗತಿಕ ಪೂರೈಕೆ ಬದ್ಧತೆ ಈಡೇರಿಸುವ ಸಲುವಾಗಿ, ಮುಂಚೂಣಿಯಾಗಿಯೇ ಉತ್ಪಾದನೆ ಹಾಗೂ ಸಂಗ್ರಹದ ಬಗ್ಗೆ ನಿರ್ಧರಿಸಬೇಕಾಗುತ್ತದೆ. ಕೋವಿಶೀಲ್ಡ್ ದಾಸ್ತಾನು ನಿರಂತರವಾಗಿ ಹೆಚ್ಚಾಗುತ್ತಿರುವುದರಿಂದ, ಇತರೆ ಜೀವ ರಕ್ಷಕ ಲಸಿಕೆಗಳ ಉತ್ಪಾದನೆ, ಸಂಗ್ರಹ ಹಾಗೂ ಪೂರೈಕೆಗೆ ಸಮಸ್ಯೆಯಾಗಿದೆ ಎಂದು ಸಿಂಗ್ ಪತ್ರದಲ್ಲಿ ಹೇಳಿದ್ದಾರೆ.

ಈ ಸಮಸ್ಯೆಯಿಂದಾಗಿ ನಮ್ಮ ದೇಶದ ಹಾಗೂ ವಿಶ್ವದ ಇತರೆ ಜೀವರಕ್ಷಕ ಲಸಿಕೆಗಳ ಪೂರೈಕೆಗೆ ಸಮಸ್ಯೆಯಾಗಿದೆ. ತ್ವರಿತವಾಗಿ ಕೋವಿಶೀಲ್ಡ್ ಲಸಿಕೆಯನ್ನು ದೇಶೀಯವಾಗಿ ಹಾಗೂ ಜಾಗತಿಕವಾಗಿ ಪೂರೈಸಲು ವ್ಯವಸ್ಥೆ ಮಾಡಬೇಕು ಎಂದು ಸಿಂಗ್ ಪತ್ರದಲ್ಲಿ ಕೇಳಿದ್ದಾರೆ. ಈ ಹಿನ್ನೆಲೆಯಲ್ಲಿ ಎಸ್.ಐ.ಐ. 50 ಲಕ್ಷ ಡೋಸ್‌ಗಳ ಕೋವಿಶೀಲ್ಡ್ ಲಸಿಕೆಯನ್ನು ರಫ್ತು ಮಾಡಲು ಕೇಂದ್ರ ಸರ್ಕಾರ ಅನುಮತಿ ನೀಡಿದೆ. ಲಸಿಕೆಗಳನ್ನು ನೇಪಾಳ, ತಜಕಿಸ್ತಾನ, ಬಾಂಗ್ಲಾ ದೇಶ ಹಾಗೂ ಮೊಜಾಂಬಿಕ್‌ಗಳಿಗೆ ಪೂರೈಸಲಾಗುವುದು ಎಂದು ಅಧಿಕೃತ ಮೂಲಗಳು ತಿಳಿಸಿವೆ. ನವೆಂಬರ್ 23ರಿಂದ ಎಸ್.ಐ.ಐ. ಕೋವಿಡ್ ಲಸಿಕೆಗಳ ರಫ್ತು ಆರಭಿಸಲಿದೆ.

# ಹರಿಹರ ತಾ.ನಲ್ಲಿ ಬೆಳೆ ನಾಶ : ತಹಶೀಲ್ದಾರ್ ಗಿರೀಶ್ ಭೇಟಿ



ದಾವಣಗೆರೆ, ನ.21- ದೇವರ ಬೆಳಕೆರೆ ಪಿಕಪ್ ಡ್ಯಾಂ ಹಿನ್ನೀರು ಹೆಚ್ಚಾದ ಪರಿಣಾಮ 200 ಎಕರೆಗಳಿಗಿಂತಲೂ ಹೆಚ್ಚು ಪ್ರದೇಶದಲ್ಲಿ ಬೆಳೆದ ಬೆಳೆ ನೀರಿನಲ್ಲಿ ಮುಳುಗಡೆಯಾಗಿದ್ದು, ದಾವಣಗೆರೆಯ ತಹಶೀಲ್ದಾರ್ ಗಿರೀಶ್ ಭೇಟಿ ನೀಡಿ ಪರಿಶೀಲಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ತಹಶೀಲ್ದಾರ್ ಗಿರೀಶ್, ಹಿನ್ನೀರು ಹೆಚ್ಚಾಗಿ ಜಮೀನುಗಳು ಮುಳುಗಡೆಯಾಗಿದ್ದನ್ನು ಕಂಡು ಹರಿಹರ ತಹಶೀಲ್ದಾರ್ ಹಾಗೂ ಎಂಜಿನಿಯರ್‌ಗಳೊಂದಿಗೆ ಮುಂದಿನ ಕ್ರಮಗಳ ಬಗ್ಗೆ ಚರ್ಚಿಸಿರುವುದಾಗಿ ತಿಳಿಸಿದ್ದಾರೆ.

ಜಮೀನು ವೀಕ್ಷಿಸಲೆಂದು ಹೋದ ರೈತರು ಜಮೀನು ಮುಳುಗಡೆಯಾಗಿ ಮನನೊಂದು ಹಿಂತಿರುಗಿ ಮನೆಗೆ ಬಾರದೇ ಇರುವ ನಿರ್ಧಾರ ಕೈಗೊಂಡಿದ್ದಾಗ, ತಹಶೀಲ್ದಾರರು ಮನವೊಲಿಸಿ ರೈತರನ್ನು ತೆಪ್ಪದ ಮೂಲಕ ಕರೆ ತರುವ ಪ್ರಯತ್ನದಲ್ಲಿ ಸಫಲರಾದರು.

ಪ್ರತಿ ವರ್ಷವೂ ಇದೇ ರೀತಿಯ ಘಟನೆಗಳು ನಡೆಯುತ್ತಿವೆ ಎಂದು ರೈತರು ಅಳಲು ತೋಡಿಕೊಂಡಿದ್ದಾರೆ.


## ಬೇಕಾಗಿದ್ದಾರೆ

Diploma in Hardware Networking / Software

2 ವರ್ಷ ಅನುಭವ ಇರುವವರು ಬೇಕಾಗಿದ್ದಾರೆ. ಅನುಭವವುಳ್ಳ ಅಭ್ಯರ್ಥಿಗಳಿಗೆ ಹೆಚ್ಚಿನ ಆದ್ಯತೆ.

ಎ.ಕೆ. ಫಾರ್ಮದಲ್ಲಿ ಸ್ಟಾಕ್ ತೆಗೆಯಲು PUC / Diploma / Degree ಆದ ಉತ್ಸಾಹಿ ಯುವಕರು ಬೇಕಾಗಿದ್ದಾರೆ.

ಆಯ್ಕೆ ಆದ ಅಭ್ಯರ್ಥಿಗಳಿಗೆ, ಆಕರ್ಷಕ ವೇತನ, PF, ESI ಮತ್ತು Gratuity ಸೌಲಭ್ಯಗಳು ಹಾಗೂ ಕಾರ್ಪೊರೇಟ್ ತರಬೇತಿ ಇರುತ್ತದೆ.

ಸಂಪರ್ಕಿಸಿ : ಎ.ಕೆ. ಫಾರ್ಮ

ತರಳಬಾಳು ಶಾಲೆ ಎದುರು, ಹದಡಿ ರಸ್ತೆ, ದಾವಣಗೆರೆ.





## ದಾಸ ಶ್ರೇಷ್ಠ ಶ್ರೀ ಕನಕದಾಸರ 534ನೇ ಜಯಂತ್ಯೋತ್ಸವದ ಶುಭಾಶಯಗಳು

ಶ್ರೀ ವಿಜಯಕುಮಾರ್ ಬಿ. ಅಧ್ಯಕ್ಷರು — ಶ್ರೀ ನಿರಂಜನ ಬಾಬು ಟಿ.ಹೆಚ್. ಉಪಾಧ್ಯಕ್ಷರು

**ನಿರ್ದೇಶಕರು :** ♦ ಹೇಮಂತಕುಮಾರ್ ಕೆ. ♦ ಪ್ರಕಾಶ್ ಕೆ.ಜಿ. ♦ ಶ್ರೀಮತಿ ಜೀವಿಕಾ ಈ.ವೈ. ♦ ಶ್ರೀಮತಿ ಶಾಂತಮ್ಮ ಟಿ. ಸವದತ್ತಿ ♦ ಭೀಮಪ್ಪ ಎ.ಡಿ. ♦ ಹಿರೇಮಠ ಎಸ್.ಎಂ, ♦ ಜಯರಾಮ್ ಕೆ.ಜಿ. ♦ ಷಣ್ಮುಖಪ್ಪ ♦ ಲೋಹಿತ್ ಈ.ವೈ.

**ವಿಶೇಷ ಆಹ್ವಾನಿತರು:** ♦ ಆನಂದ ಸಿ.ಬಿ. ♦ ಮಾಲತೇಶ್ ಜಿ.ಆರ್.

**ಸಿಬ್ಬಂದಿ ವರ್ಗ:** ♦ ಎಸ್.ರಮೇಶ್, ಕಾರ್ಯದರ್ಶಿ, ♦ ಶಶಿಕಲಾ ಎನ್.ಬಿ. ಸಹಾಯಕರು, ♦ ಶ್ರೀಮತಿ ಪಿ. ಮಂಜುಳ, ಅಟೆಂಡರ್, ♦ ಶ್ರೀಮತಿ ಭವಾನಿ ಸಹಾಯಕರು. ♦ ಜೆ.ಸಿ. ರಮೇಶ್ , ♦ ಶಿವಕುಮಾರ್ ಟಿ. ♦ ವರುಣ್ ಕುಮಾರ್ ಕಂಬಳಿ, ಪಿಗ್ಮಿ ಸಂಗ್ರಾಹಕರು

**ಕವಿರತ್ನ ಕಾಳಿದಾಸ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)**

ಶಿವಾಲಿ ಟಾಕೀಸ್ ಎದುರು, ದಾವಣಗೆರೆ-577 006. ಫೋ. : 08192235091, ಮೊ. : 9740680677



## ಸಾರ್ವಜನಿಕ ಪ್ರಕಟಣೆ

ಷೆಡ್ಯೂಲ್‌ನಲ್ಲಿ ವಿವರಿಸಿರುವ ಸ್ವತ್ತುಗಳು ಹರಪನಹಳ್ಳಿ ತಾಲ್ಲೂಕು ಅರಸೀಕೆರೆ ಹೋಬಳಿ ಸತ್ತೂರು ಗ್ರಾಮಕ್ಕೆ ಸೇರಿದ್ದು, ಸದರಿ ಜಮೀನುಗಳು ನನ್ನ ಕಕ್ಷಿಗಾರರಾದ ಗೊಲ್ಲರ ಗುರುರಾಜಪ್ಪ ಮತ್ತು ಆತನ ಸಹೋದರರಾದು ಆಗಿದ್ದು ಸದರಿ ಜಮೀನುಗಳ ಮೇಲೆ ಹರಪನಹಳ್ಳಿ ಘನ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ. ದಂ.ಗಳವರ ನ್ಯಾಯಾಲಯದಲ್ಲಿ ಅಸಲು ದಾವೆ ಸಂಖ್ಯೆ 182/2021 ಎಂದು ನೋಂದಣಿಯಾಗಿದ್ದು, ಸುನಾವಣೆಗೆ ಬಾಕಿ ಇರುತ್ತದೆ. ಆದರೂ ಕೂಡ ಈಗ ಕಾನೂನು ಬಾಹಿರವಾಗಿ ಶ್ರೀಮತಿ ಸುಧಾ ಗಂಡ ಜನಾರ್ಧನ ಹಾಗೂ ಪರಮೇಶ್ವರ ತಂದೆ ರೇವಣಸಿದ್ದಪ್ಪ ಎನ್ನುವವರು ಮ್ಯುಟೇಷನ್ ಮಾಡಿಸಿಕೊಂಡಿದ್ದು ಈಗ ದಾವೆ ಸಲ್ಲಿಸಿರುವುದರಿಂದ ನನ್ನ ಕಕ್ಷಿದಾರರಿಗೆ ಹಲವಾರು ಪ್ರಕರಣಗಳಿಗೆ ಆಸ್ಪದವಾಗುವಂತಹ ಮತ್ತು ತಮ್ಮ ಬಾಧ್ಯತೆಯಿಂದ ತಪ್ಪಿಸಿಕೊಳ್ಳಲು ಮಾರಾಟ, ವಗೈರೆ ಮಾಡುವ ದುರುದ್ದೇಶ ಹೊಂದಿರುತ್ತಾರೆ. ಕಾರಣ ಸಾರ್ವಜನಿಕರು ಯಾರೂ ಷೆಡ್ಯೂಲ್‌ನಲ್ಲಿ ವಿವರಿಸಿರುವ ಜಮೀನುಗಳಿಗೆ ಸಂಬಂಧಪಟ್ಟಂತೆ ಯಾವುದೇ ವ್ಯವಹಾರ ಮಾಡಬಾರದೆಂದು ಈ ಮೂಲಕ ತಿಳಿಸಲಾಗಿದೆ.

**ಷೆಡ್ಯೂಲ್**

ವಿಜಯನಗರ ಜಿಲ್ಲೆ ಹರಪನಹಳ್ಳಿ ತಾಲ್ಲೂಕು ಅರಸೀಕೆರೆ ಹೋಬಳಿ ಸತ್ತೂರು ಗ್ರಾಮಕ್ಕೆ ಸೇರಿದ ಜಮೀನುಗಳು

| ಕ್ರ.ಸಂ | ಸರ್ವೆ ನಂಬರ್ | ವಿಸ್ತೀರ್ಣ A-C | ಕಂದಾಯ ರೂ.ಪೈ |
|---|---|---|---|
| 1. | 221/I (ಐ) | 7-12 | 1-64 |
| 2. | 221/14 | 7-13 | 1-64 |
| 3. | 221/15 | 7-12 | 1-64 |
| 4. | 221/16 | 7-12 | 1-64 |

**Ramanagoud Patil** B.Sc., L L.B (Advocate)
KAR/406/1995, Harapanahalli-583131
**M: 94484 42656**



## ಕರ್ನಾಟಕ ಗ್ರಾಮೀಣ ಬ್ಯಾಂಕ್

(ಸರ್ಕಾರಿ ಸ್ವಾಮ್ಯದ ಷೆಡ್ಯೂಲ್ಡ್ ಬ್ಯಾಂಕ್) ಪ್ರವರ್ತಕರು : ಕೆನರಾ ಬ್ಯಾಂಕ್

ಪ್ರಧಾನ ಕಛೇರಿ : ಸಂಗನಕಲ್ಲು ರಸ್ತೆ, ಗಾಂಧಿನಗರ, ಬಳ್ಳಾರಿ–583 103 (ಕರ್ನಾಟಕ)

**ಪ್ರಾದೇಶಿಕ ಕಚೇರಿ : ನಂ.496/66, ಸಂಕೋಳ್ ಪ್ಲಾಜಾ, 2ನೇ ಮಹಡಿ ನಾಗನೂರು ರಸ್ತೆ, ಶಾಮನೂರು, ದಾವಣಗೆರೆ–577 004**

ಫೋನ್: 08192 - 223913, 233632 e-mail: rodvg@kgbk.in

### ಚಿನ್ನಾಭರಣಗಳ ಬಹಿರಂಗ ಹರಾಜು

ಈ ಕೆಳಕಂಡ ಗ್ರಾಹಕರು ಕರ್ನಾಟಕ ಗ್ರಾಮೀಣ ಬ್ಯಾಂಕ್‌ನ ಕುಂಬಳೂರು (ಹರಿಹರ) ಶಾಖೆಯಲ್ಲಿ ತಮ್ಮ ಚಿನ್ನಾಭರಣ ಆಧಾರದ ಸಾಲ ಪಡೆದಿದ್ದು, ವಾಯಿದೆ ಪ್ರಕಾರ ಸಾಲ ಮರುಪಾವತಿ ಮಾಡದೇ ಇದ್ದ ಕಾರಣ, ಇವರಿಗೆ ರಿಜಿಸ್ಟರ್ಡ್ ಅಂಚೆ ಮುಖಾಂತರ ಸಾಲಮರುಪಾವತಿ ಮಾಡುವಂತೆ ಕೋರಿ ಕಳುಹಿಸಿದ ನೋಟಿಸ್ ಜಾರಿಯಾಗಿರುತ್ತದೆ. ಆದರೂ ಸಾಲ ಮರುಪಾವತಿ ಮಾಡಲು ಯಾವುದೇ ಕ್ರಮ ಕೈಗೊಳ್ಳದೇ ಇರುವುದರಿಂದ, ಅವರಿಗೆ ಈ ಮೂಲಕ ತಿಳಿಸುವುದೇನೆಂದರೆ, ತಾರೀಖು 08–12–2021 ರಂದು ಅಥವಾ ಅದಕ್ಕೆ ಮುಂಚೆ ಬ್ಯಾಂಕಿಗೆ ಭೇಟಿ ಕೊಟ್ಟು ಸಂಪೂರ್ಣ ಹಣ, ಬಡ್ಡಿ ಹಾಗೂ ಇತರೆ ಖರ್ಚುಗಳನ್ನು ಮರುಪಾವತಿ ಮಾಡತಕ್ಕದ್ದು, ಇಲ್ಲವಾದಲ್ಲಿ ತಾವು ಒತ್ತೆ ಇಟ್ಟ ಆಭರಣಗಳನ್ನು ತಾರೀಖು 08–12–2021 ರಂದು ಬೆಳಿಗ್ಗೆ 11.00 ಗಂಟೆಗೆ ಅಥವಾ ಬ್ಯಾಂಕಿಗೆ ಸೂಕ್ತವಾದ ಇನ್ನಾವುದೇ ದಿನದಂದು ನೋಟೀಸು ಕೊಡದೇ ಶಾಖೆಯ ಆವರಣದಲ್ಲಿ ಬಹಿರಂಗವಾಗಿ ಯಾ ಖಾಸಗಿಯಾಗಿ ಹರಾಜು ಮಾಡಲಾಗುವುದು. ಸದರಿ ಹರಾಜಿನಿಂದ ಬಂದ ಮೊತ್ತವು ತಮ್ಮ ಸಾಲವನ್ನು ಸಂಪೂರ್ಣ ತೀರುವಳಿ ಮಾಡಲು ವಿಫಲವಾದಲ್ಲಿ ತಾವು ವೈಯಕ್ತಿಕವಾಗಿ ಹೊಣೆಗಾರರಾಗಿರುತ್ತೀರಿ ಹಾಗೂ ಹರಾಜಿಗೆ ತಗಲುವ ಎಲ್ಲಾ ವೆಚ್ಚಕ್ಕೂ ನೀವೇ ಹೊಣೆಗಾರರೆಂದು ತಿಳಿಯಿರಿ.

**ಶಾಖೆ: ಕುಂಬಳೂರು (ಹರಿಹರ), ಹರಿಹರ ತಾಲ್ಲೂಕು, ಮೊ: 9880433090**

| ಕ್ರ. ಸಂ. | ಸಾಲಗಾರರ ಹೆಸರು ಮತ್ತು ವಿಳಾಸ | ಸಾಲದ ಸಂಖ್ಯೆ | ಸಾಲದ ಬಾಬ್ತು + ಬಡ್ಡಿ |
|---|---|---|---|
| 1 | ಶ್ರೀ ಅರುಣಕುಮಾರ ಬಿ.ಹೆಚ್. ಬಿನ್. ಹಾಲೇಶಪ್ಪ ಬಿ.ಕೆ., ಕುಂಬಳೂರು | 40712302094019 | 1,01,931–40 |
| 2 | ಶ್ರೀ ಧನಂಜಯ ಕುಮಾರ್ ಬಿನ್. ಪುಟ್ಟಪ್ಪ ಕಡೇಮನಿ, ಕುಂಬಳೂರು | 40712302026520 | 73,260–00 |
| 3 | ಶ್ರೀಮತಿ ಗೌರಮ್ಮ ಎನ್. ಕೋಂ. ಚನ್ನಬಸಪ್ಪ, ನಿಟ್ಟೂರು | 40712302025720 | 24,543–00 |
| 4 | ಶ್ರೀಮತಿ ಗೌರಮ್ಮ ಎನ್. ಕೋಂ. ಚನ್ನಬಸಪ್ಪ, ನಿಟ್ಟೂರು | 40712302049119 | 1,06,400–40 |
| 5 | ಶ್ರೀ ಹನುಮಂತಪ್ಪ ಬಿನ್. ಮುನಿಯಪ್ಪ, ಕುಂಬಳೂರು | 40712302049919 | 1,78,781–40 |
| 6 | ಶ್ರೀ ಕಡೂರು ಈರಪ್ಪ ಬಿನ್. ಸಿದ್ದಪ್ಪ, ಕುಂಬಳೂರು | 40712302027520 | 47,251–00 |
| 7 | ಶ್ರೀಮತಿ ಲಲಿತಮ್ಮ ಕೋಂ. ಗಂಗಾಧರ, ಕುಂಬಳೂರು | 40712302090420 | 38,007–00 |
| 8 | ಶ್ರೀ ಎಂ. ಮಂಜಪ್ಪ ಬಿನ್. ಎಂ. ಮಹೇಶ್ವರಪ್ಪ, ಜಗಳಿ | 40712302007120 | 24,481–00 |
| 9 | ಶ್ರೀ ಎಂ. ಮಂಜಪ್ಪ ಬಿನ್. ಎಂ. ಮಹೇಶ್ವರಪ್ಪ, ಜಗಳಿ | 40712302069620 | 27,375–00 |
| 10 | ಶ್ರೀ ಎಂ. ಮಂಜಪ್ಪ ಬಿನ್. ಎಂ. ಮಹೇಶ್ವರಪ್ಪ, ಜಗಳಿ | 40712302082619 | 25,519–40 |
| 11 | ಶ್ರೀ ಎಂ. ಮಂಜಪ್ಪ ಬಿನ್. ಎಂ. ಮಹೇಶ್ವರಪ್ಪ, ಜಗಳಿ | 40712302083120 | 71,159–00 |
| 12 | ಶ್ರೀ ನಾರಾಯಣಪ್ಪ ಕೆ. ಬಿನ್. ಮರಿಯಪ್ಪ, ಕುಂಬಳೂರು | 40712302070319 | 2,34,859–40 |
| 13 | ಶ್ರೀಮತಿ ನೀಲಮ್ಮ ಕೋಂ. ಪಿ. ದೇವೇಂದ್ರಪ್ಪ, ಜಿಗಳಿ | 40712302077519 | 25,376–40 |
| 14 | ಶ್ರೀ ರಾಮಮೂರ್ತಿ ಎನ್. ಬಿನ್. ನಿರಂಜನ್‌ಮೂರ್ತಿ, ನಿಟ್ಟೂರು | 40712302077219 | 55,251–40 |
| 15 | ಶ್ರೀ ರಂಗಪ್ಪ ಬಿ. ಬಿನ್. ಬೆಳ್ಳೋದ್ರಪ್ಪ, ಜಗಳಿ | 40712302062519 | 20,819–40 |
| 16 | ಶ್ರೀಮತಿ ರತ್ನಮ್ಮ ಕೋಂ. ಹನುಮಂತಪ್ಪ, ನಿಟ್ಟೂರು | 40712302026720 | 64,989–00 |
| 17 | ಶ್ರೀಮತಿ ಸಲಾಲಮ್ಮ ಕೋಂ. ವಿಷ್ಣು, ವಿ.ಎನ್. ಕ್ಯಾಂಪ್ | 40712302035720 | 1,15,285–00 |
| 18 | ಶ್ರೀಮತಿ ಶಾಂತಮ್ಮ ಕೋಂ. ಶೇಖರಪ್ಪ, ಗುಳದಳ್ಳಿ | 40712302050920 | 24,769–00 |
| 19 | ಶ್ರೀಮತಿ ಶೋಭ ಎಸ್. ಕೋಂ. ಶ್ರೀಧರ, ಕುಂಬಳೂರು | 40712302071319 | 30,409–00 |
| 20 | ಶ್ರೀಮತಿ ಸಿದ್ದಮ್ಮ ಕೋಂ. ಹನುಮಂತಪ್ಪ, ಜಿಗಳಿ | 40712302022820 | 47,387–00 |
| 21 | ಶ್ರೀಮತಿ ಸುಮ ಕೋಂ. ಹನುಮಂತಪ್ಪ, ಕುಂಬಳೂರು | 40712302051920 | 22,381–00 |
| 22 | ಶ್ರೀಮತಿ ಸುಶೀಲಮ್ಮ ಕೋಂ. ಮಹದೇವಪ್ಪ, ಕುಂಬಳೂರು | 40712302027519 | 38,439–40 |

ಸ್ಥಳ : ದಾವಣಗೆರೆ
ದಿನಾಂಕ : 21–11–2021

ಸಹಿ/– ಕರ್ನಾಟಕ ಗ್ರಾಮೀಣ ಬ್ಯಾಂಕ್
ಪ್ರಾದೇಶಿಕ ಕಛೇರಿ,ದಾವಣಗೆರೆ.

# ದೇವಸ್ಥಾನಗಳು ಧಾರ್ಮಿಕ, ಸಾಂಸ್ಕೃತಿಕ ಕೇಂದ್ರಗಳು



**ಅಡ್ಡ ಪಲ್ಲಕ್ಕಿ ಮಹೋತ್ಸವ ಹಾಗು ಪಾದಯಾತ್ರೆ ಎರಡನ್ನೂ ನಡೆಸಿದ ಮೊದಲ ಏಕೈಕ ಗ್ರಾಮ ನರಸಗೊಂಡನಹಳ್ಳಿ. - ಶ್ರೀ ಶ್ರೀಶೈಲ ಜಗದ್ಗುರುಗಳ ಶ್ಲಾಘನೆ**

ಹೊನ್ನಾಳಿ, ನ.21- ದೇವಸ್ಥಾನಗಳು ಭಾರತ ದೇಶದ ಧಾರ್ಮಿಕ, ಸಾಂಸ್ಕೃತಿಕ ಕೇಂದ್ರಗಳಾಗಿವೆ ಎಂದು ಶ್ರೀ ಶ್ರೀಶೈಲ ಪೀಠದ ಜಗದ್ಗುರುಗಳಾದ ಡಾ. ಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ತಾಲ್ಲೂಕಿನ ನರಸಗೊಂಡನಹಳ್ಳಿ ಗ್ರಾಮದಲ್ಲಿ ಶ್ರೀ ಜಗದ್ಗುರು ರೇಣುಕಾ ಚಾರ್ಯರ, ಶ್ರೀ ಭೂತೇಶ್ವರ ಸ್ವಾಮಿಯ ನೂತನ ಮಂದಿರ ಪ್ರವೇಶ ಮತ್ತು ಮೂರ್ತಿ ಪ್ರತಿಷ್ಠಾಪನೆಯ ಅಂಗವಾಗಿ ಭಾನುವಾರ ಹಮ್ಮಿಕೊಂಡ ಭಾವೈಕ್ಯ ಧರ್ಮಸಭೆಯ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ಪ್ರಾಚೀನ ಭಾರತೀಯ ಶಿಲ್ಪಕಲೆಯನ್ನು ಜಗತ್ತಿಗೆ ಪರಿಚಯಿಸಿದ ಕೀರ್ತಿ ನಮ್ಮ ದೇಶದ ದೇವಸ್ಥಾನಗಳಿಗೆ ಸಲ್ಲುತ್ತದೆ. ವಿಶ್ವದ ಎಲ್ಲಾ ರಾಷ್ಟ್ರಗಳ ದೇವಸ್ಥಾನಗಳಿಗಿಂತ ಭಾರತದಲ್ಲಿ ದೇವಸ್ಥಾನಗಳ ಸಂಖ್ಯೆ ಅಧಿಕ. ಪ್ರಾಚೀನ ಕಾಲದಲ್ಲಿ ಧಾರ್ಮಿಕವಾಗಿ ಜನರ ನಾಡಿ ಮಿಡಿತವನ್ನು ಹಿಡಿದಿಟ್ಟುಕೊಂಡ ಶಕ್ತಿ ದೇವಸ್ಥಾನಗಳು. ಹಾಗಾಗಿ, ದೇವಸ್ಥಾನಗಳ ನಿರ್ಮಾಣದಿಂದ ಸಮಾಜದಲ್ಲಿ ಶಾಂತಿ-ನೆಮ್ಮದಿ ನೆಲೆಸುತ್ತದೆ ಎಂದು ತಿಳಿಸಿದರು.

ಹೊನ್ನಾಳಿ ಹಿರೇಕಲ್ಮಠದ ಒಡೆಯರ್ ಡಾ. ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ನಿರ್ಮಲವಾದ ಭಕ್ತಿಯಿಂದ ಮಾತ್ರ ಭಗವಂತ ಸಂಪನ್ನಾಗುತ್ತಾನೆ ಎಂದು ಹೇಳಿದರು.

ಶ್ರೀಶೈಲ ಪೀಠದ ಜಗದ್ಗುರು ಡಾ. ಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಸಾಮಾಜಿಕ ಸೇವಾ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ನೆರೆ ಸಂದರ್ಭದಲ್ಲಿ ಉತ್ತರ ಕರ್ನಾಟಕ ಭಾಗದಲ್ಲಿ ಶ್ರೀಶೈಲ ಪೀಠದ ವತಿಯಿಂದ 101 ಮನೆಗಳನ್ನು ನಿರ್ಮಿಸಿಕೊಡುವುದಾಗಿ ಹೇಳಿದ್ದರು. ಅದರಂತೆ ಮನೆಗಳು ಈಗಾಗಲೇ ನಿರ್ಮಾಣದ ಹಂತದಲ್ಲಿವೆ. ಆ ಮನೆಗಳ ಪೈಕಿ ಒಂದು ಮನೆ ನಿರ್ಮಾಣದ ಹಣವನ್ನು ಹೊನ್ನಾಳಿ ಹಿರೇಕಲ್ಮಠ ಭರಿಸಲಿದೆ ಎಂದರು.

ಜಗದ್ಗುರುಗಳು ಪಟ್ಟಾಧಿಕಾರವಾಗಿ 12 ವರ್ಷಗಳಿಂದ ಭಕ್ತರು ತಮಗೆ ಅರ್ಪಿಸಿದ ಬಂಗಾರ, ಇನ್ನಿತರೆ ಒಡವೆಗಳನ್ನು ಮಾರಾಟ ಮಾಡಿ, ಆ ಹಣವನ್ನು ಬಳಸಿ ಕೊರೊನಾ ಕಾಲಘಟ್ಟದಲ್ಲಿ ನಿರಾಶ್ರಿತರಿಗೆ ಮನೆ ಕಟ್ಟಲು ಮುಂದಾಗಿರುವುದೂ ಸೇರಿದಂತೆ ವಿಶಿಷ್ಟ ಸೇವೆ ಸಲ್ಲಿಸಿದರು. ಇದೀಗ, ಆಂಧ್ರಪ್ರದೇಶ ಸರ್ಕಾರ ಶ್ರೀಶೈಲ ಪೀಠಕ್ಕೆ 10 ಎಕರೆ ಭೂಮಿ ಮಂಜೂರು ಮಾಡಿದೆ. ಆ ಜಾಗದಲ್ಲಿ 100 ಕೋಟಿ ರೂ.ಗಳ ವೆಚ್ಚದಲ್ಲಿ 101 ಹಾಸಿಗೆಗಳ ಸುಸಜ್ಜಿತ ಆಸ್ಪತ್ರೆಯನ್ನು ನಿರ್ಮಿಸಲು ಉದ್ದೇಶಿಸಿ ದ್ದಾರೆ. ವಿದ್ಯಾರ್ಥಿಗಳ ಅಧ್ಯಯನಕ್ಕೆ ಅನುಕೂಲ ಆಗಲಿ ಎಂಬ ಉದ್ದೇಶದಿಂದ ಒಂದು ಗುರುಕುಲವನ್ನು ಸ್ಥಾಪಿಸಲು ನಿರ್ಧರಿಸಿ ದ್ದಾರೆ. ಹೀಗೆ, ಅವರ ಸೇವಾ ಮನೋಭಾವ ಅನನ್ಯವಾದುದು ಎಂದು ವಿವರಿಸಿದರು.

ಹೊಸದುರ್ಗದ ಕುಂಚಿಟಿಗ ಮಹಾಸಂಸ್ಥಾನ ಮಠದ ಶ್ರೀ ಡಾ. ಶಾಂತವೀರ ಸ್ವಾಮೀಜಿ, ಹೊಟ್ಯಾಪುರ ಹಿರೇಮಠದ ಶ್ರೀ ಗಿರಿಸಿದ್ಧೇಶ್ವರ ಶಿವಾಚಾರ್ಯ ಸ್ವಾಮೀಜಿ, ನಾಗವಂದ ಹೊರಗಿನ ಮಠದ ಶ್ರೀ ಶಿವಯೋಗಿ ಶಿವಾನಂದ ಶಿವಾಚಾರ್ಯ ಸ್ವಾಮೀಜಿ, ಹೂವಿನಹಡಗಲಿ ತಾಲ್ಲೂಕು ಉತ್ತಂಗಿಯ ಅಷ್ಟಮಠಗಳ ಸಂಸ್ಥಾನ ಮಠಾಧೀಶರಾದ ಶ್ರೀ ಸೋಮಶಂಕರ ಸ್ವಾಮೀಜಿ, ಮಾಜಿ ಶಾಸಕ ಡಿ.ಜಿ. ಶಾಂತನಗೌಡ, ಬಿಜೆಪಿ ಮುಖಂಡ ಎಂ.ಪಿ. ರಮೇಶ್, ಎ.ಜಿ. ಹೇಮಲತಾ ಇತರರು ಮಾತನಾಡಿದರು.

ಅರಕೆರೆ ಗ್ರಾಪಂ ಅಧ್ಯಕ್ಷ ಎ.ಬಿ. ರಂಗಪ್ಪ, ಉಪಾಧ್ಯಕ್ಷೆ ಪ್ರಮೀಳಾ ಶಂಕರಾಚಾರಿ, ಸದಸ್ಯರಾದ ಮಂಜುನಾಥ್, ನರಸಗೊಂಡನಹಳ್ಳಿ ಗ್ರಾಮದ ಮಠದ ಮುರುಗೇಂದ್ರಯ್ಯ, ಮುಖಂಡರಾದ ಎನ್. ಎಚ್. ರಘು, ವೈ.ಎಸ್. ಸುರೇಂದ್ರ, ಕೆ.ಆರ್. ಶ್ರೀನಿವಾಸ್, ಮಂಜುನಾಥ್, ಅರಕೆರೆ ಎಸ್. ಜಿ. ಮಧುಗೌಡ ಇನ್ನಿತರರಿದ್ದರು.

# ಕೊರೊನಾ ನಂತರ 4 ಕೋಟಿ ಹಿರಿಯರು ರೈಲ್ವೆ ವಿನಾಯಿತಿಯಿಂದ ವಂಚಿತ

ನವದೆಹಲಿ, ನ. 21 – 2020ರ ಮಾರ್ಚ್‌ನಲ್ಲಿ ಕೊರೊನಾ ವೈರಸ್ ಕಂಡು ಬಂದ ನಂತರ ರೈಲ್ವೆ ಹಿರಿಯ ನಾಗರಿಕರಿಗೆ ನೀಡಲಾಗುತ್ತಿದ್ದ ವಿನಾಯಿತಿಯನ್ನು ರದ್ದುಗೊಳಿಸಿದೆ. ಹೀಗಾಗಿ ನಾಲ್ಕು ಕೋಟಿ ಹಿರಿಯ ನಾಗರಿಕರು ಪ್ರಯಾಣಕ್ಕೆ ಪೂರ್ಣ ದರ ಪಾವತಿಸುತ್ತಿದ್ದಾರೆ.

ಮಧ್ಯ ಪ್ರದೇಶದ ಚಂದ್ರ ಶೇಖರ್ ಗೌರ್ ಅವರು ದಾಖಲಿಸಿದ್ದ ಮಾಹಿತಿ ಹಕ್ಕು ಅರ್ಜಿಗೆ ಉತ್ತರಿಸಿರುವ ರೈಲ್ವೆ, ಮಾರ್ಚ್ 22, 2020ರಿಂದ ಸೆಪ್ಟೆಂಬರ್ 2021ರ ನಡುವೆ 3.7 ಕೋಟಿ ಹಿರಿಯ ನಾಗರಿಕರು ಪ್ರಯಾಣ ಮಾಡಿದ್ದಾರೆ ಎಂದು ತಿಳಿಸಿದೆ.

ಈ ಅವಧಿಯಲ್ಲಿ ಹಿರಿಯ ನಾಗರಕರಿಗೆ ಪ್ರಯಾಣ ದರದಲ್ಲಿ ವಿನಾಯಿತಿ ನೀಡಿರಲಿಲ್ಲ. ಇದುವರೆಗೂ ವಿನಾಯಿತಿಯನ್ನು ಪುನರಾರಂಭಿಸಿಲ್ಲ.

ಹಿರಿಯ ನಾಗರಿಕರಲ್ಲಿ ಮಹಿಳೆಯರು ಶೇ.50 ಹಾಗೂ ಪುರುಷರು ಶೇ.40ರ ವಿನಾಯಿತಿ ಪಡೆಯಬಹುದು. ಮಹಿಳೆಯರಿಗೆ ಕನಿಷ್ಠ ವಯೋಮಿತಿ 58 ಆಗಿದ್ದರೆ, ಪುರುಷರಿಗೆ 60 ಆಗಿದೆ.

ಕಳೆದ ಎರಡು ದಶಕಗಳಿಂದ ರೈಲ್ವೆ ನೀಡುತ್ತಿರುವ ವಿನಾಯಿತಿ ಹಲವಾರು ಚರ್ಚೆಗಳಿಗೆ ಕಾರಣವಾಗಿದೆ. ಹಲವಾರು ಸಮಿತಿಗಳು ವಿನಾಯಿತಿ ವಾಪಸ್ ಪಡೆಯಲು ಶಿಫಾರಸ್ಸು ಮಾಡಿವೆ. 2016ರ ಜುಲೈ ನಂತರ ಹಿರಿಯರು ಟಿಕೆಟ್ ಬುಕ್ ಮಾಡುವಾಗ ವಿನಾಯಿತಿ ಪಡೆಯುವುದನ್ನು ಜನರ ಆಯ್ಕೆಗೆ ಬಿಡಲಾಗಿದೆ. ಜುಲೈ 2017ರ ನಂತರ ಹಿರಿಯ ನಾಗರಿಕರು ವಿನಾಯಿತಿಯನ್ನು ಭಾಗಶಃ ಇಲ್ಲವೇ ಸಂಪೂರ್ಣ ಬಿಡಲು ಅವಕಾಶ ನೀಡಲಾಗಿದೆ.

ಕಳೆದ ವಾರ ರೈಲ್ವೆಗೆ ಪತ್ರ ಬರೆದಿದ್ದ ಮಧುರೈ ಸಂಸದ ವೆಂಕಟೇಶನ್, ಹಿರಿಯ ನಾಗರಿಕರಿಗೆ ವಿನಾಯಿತಿ ನೀಡುವುದನ್ನು ಮುಂದುವರೆಸುವಂತೆ ಒತ್ತಾಯಿಸಿದ್ದರು.

ಸಿಎಜಿಯ 2019ರ ವರದಿಯ ಪ್ರಕಾರ, ವಿನಾಯಿತಿ ಬಿಟ್ಟುಕೊಡುವ ಯೋಜನೆಗೆ ಉತ್ತಮ ಸ್ಪಂದನೆ ದೊರೆತಿಲ್ಲ. 4.41 ಕೋಟಿ ಹಿರಿಯ ನಾಗರಿಕರ ಪೈಕಿ 7.53 ಲಕ್ಷ ಜನರು ಮಾತ್ರ ಶೇ.50ರಷ್ಟು ವಿನಾಯಿತಿ ಬಿಟ್ಟು ಕೊಟ್ಟಿದ್ದಾರೆ. 10.9 ಲಕ್ಷ ಜನರು ಪೂರ್ಣವಾಗಿ ವಿನಾಯಿತಿ ಬಿಟ್ಟುಕೊಟ್ಟಿದ್ದಾರೆ.

## ಕನಕ ದಾಸರ ಕುರಿತು ಇಂದು ನಗರದಲ್ಲಿ ಸ್ಪರ್ಧೆ

ಕನಕದಾಸರ ಜಯಂತಿ ಅಂಗವಾಗಿ ಅಂತರ ಕಾಲೇಜು ಮಟ್ಟದ ಪ್ರಬಂಧ ಸ್ಪರ್ಧೆ ಇಂದು ಬೆಳಿಗ್ಗೆ 10ಕ್ಕೆ ಸಿದ್ದವೀರಪ್ಪ ಬಡಾವಣೆಯ ಬಿಐಇಟಿ ಕಾಲೇಜು ರಸ್ತೆಯಲ್ಲಿರುವ ಆರ್.ಜಿ ಇನ್‌ಸ್ಟಿಟ್ಯೂಟ್ ಆಫ್ ಕಾಮರ್ಸ್ ಅಂಡ್ ಮ್ಯಾನೇಜ್‌ಮೆಂಟ್‌ನಲ್ಲಿ ನಡೆಯಲಿದೆ. ಆಸಕ್ತ ಪದವಿ ಪೂರ್ವ ಮತ್ತು ಪದವಿ ಕಾಲೇಜು ಹಂತದ ವಿದ್ಯಾರ್ಥಿಗಳು ಭಾಗವಹಿಸಬಹುದು ಎಂದು ಸಂಸ್ಥೆಯ ಅಧ್ಯಕ್ಷರಾದ ಶ್ವೇತ ಆರ್. ಗಾಂಧಿ ತಿಳಿಸಿದ್ದಾರೆ.

**ವಿಷಯ** : ಭಕ್ತಿ ಪರಂಪರೆ ಮತ್ತು ಕನಕದಾಸರು, ದಾಸ ಸಾಹಿತ್ಯದಲ್ಲಿ ಕನಕದಾಸರ ಕೊಡುಗೆ, ಕನಕ ದಾಸರ ಮತ್ತು ಸಮಕಾಲೀನತೆ, ಸಮಾಜಮುಖಿ ಚಿಂತಕರಾಗಿ ಕನಕದಾಸರು, ಕನಕ ದಾಸರ ಕೀರ್ತನೆಗಳಲ್ಲಿ ಜೀವನ ಮೌಲ್ಯ. ಪ್ರಬಂಧಗಳನ್ನು ಕನ್ನಡ, ಇಂಗ್ಲಿಷ್, ಹಿಂದಿ ಭಾಷೆಗಳಲ್ಲಿ ಬರೆಯಬಹುದಾಗಿದೆ.

ವಿವರಕ್ಕೆ ಸಂಪರ್ಕಿಸುವ ಮೊಬೈಲ್ : 8073561838, 9945608723.

## ಕಾರ್ತಿಕ ಮಾಸ ಮುಗಿಯುವವರೆಗೂ ಮಳೆ : ಕೋಡಿಮಠ ಶ್ರೀಗಳ ಭವಿಷ್ಯ



ಧಾರವಾಡ, ನ.21 - ರಾಜ್ಯದಲ್ಲಿ ವರುಣನ ರುದ್ರನರ್ತನಕ್ಕೆ ಜನಜೀವನ ತತ್ತರಿಸಿ ಹೋಗಿದೆ. ನಿರಂತರವಾಗಿ ಸುರಿಯುತ್ತಿರುವ ಮಳೆಗೆ ಅಕ್ಷರಶಃ ಜನಜೀವನ ಅಸ್ತವ್ಯಸ್ತಗೊಂಡಿದೆ. ಹಲವೆಡೆ ರೈತರ ಬೆಳೆಗಳು, ರಸ್ತೆ, ಮನೆಗಳು ಸಂಪೂರ್ಣ ಹಾನಿ ಯಾಗಿದ್ದು, ಅಪಾರ ಪ್ರಮಾಣದ ನಷ್ಟ ಉಂಟಾಗಿದೆ. ಮಳೆ ಸೃಷ್ಟಿಸಿದ ಅವಾಂತರಕ್ಕೆ ಜನರು ಪ್ರಾಣ ಕಳೆದುಕೊಂಡಿದ್ದಾರೆ.

ಭಾರೀ ಮಳೆ, ಚಳಿಗೆ ಹೈರಾಣಾಗಿರುವ ಜನತೆ, ಸಾಕಪ್ಪ ಸಾಕು ಈ ಮಳೆ ಸಹವಾಸ ಎನ್ನುತ್ತಿದ್ದಾರೆ. ಚಂಡಮಾರುತದ ಪ್ರಭಾವದಿಂದ ನವೆಂಬರ್ ತಿಂಗಳಲ್ಲಿ ದಶಕದಲ್ಲೇ ಕಂಡು ಕೇಳರಿಯದ ಮಳೆ ಸುರಿದಿದ್ದು ಜನ ಕಂಗೆಟ್ಟಿದ್ದಾರೆ. ಇನ್ನು ಎಷ್ಟು ದಿನಗಳ ಕಾಲ ಈ ಮಳೆರಾಯ ಕಾಟ ಕೊಡಲಿದ್ದಾನೆ ಎಂಬುದಕ್ಕೆ ಕೋಡಿಮಠದ ಶ್ರೀಗಳು ನುಡಿದ ಭವಿಷ್ಯ ಇದೀಗ ಮತ್ತಷ್ಟು ಆತಂಕ ಸೃಷ್ಟಿಸಿದೆ.

ಈ ಬಗ್ಗೆ ಭವಿಷ್ಯ ನುಡಿದಿರುವ ಕೋಡಿಮಠದ ಶ್ರೀ ಶಿವಾನಂದ ಶಿವಯೋಗಿ ರಾಜೇಂದ್ರ ಸ್ವಾಮೀಜಿ, 'ರಾಜ್ಯದಲ್ಲಿ ಇನ್ನೂ ಮಳೆ ಕಾಟ ಇದೆ. ಇಷ್ಟಕ್ಕೆ ನಿಲ್ಲಲ್ಲ. ಕಾರ್ತಿಕ ಮಾಸ ಮುಗಿಯುವವರೆಗೆ ಮಳೆ ನಿಲ್ಲುವುದಿಲ್ಲ. ಮಳೆ ಇನ್ನೂ ಹೆಚ್ಚಳವಾಗುವ ಲಕ್ಷಣ ಇದೆ. ಸದ್ಯ ಪ್ರಕೃತಿ ವಿಕೋಪವಾಗಿದೆ. ಏನೂ ಮಾಡಲು ಆಗುವುದಿಲ್ಲ ಎಂದಿದ್ದಾರೆ. ಹಾಗೆಯೇ ಅನಾಹುತಗಳು ಹೆಚ್ಚಾಗುವ ಸಾಧ್ಯತೆ ಇದೆ. ಸಂಕ್ರಾಂತಿವರೆಗೂ ಮಳೆ ಇರುತ್ತದೆ' ಎಂದರು.


ssims SPARSH
CENTRE FOR ACCIDENTS BONE & JOINT CARE

ಸ್ಪರ್ಶ್ ಆಸ್ಪತ್ರೆ - ಬೆಂಗಳೂರು,
ಇಲ್ಲಿನ ಪ್ರಮುಖ ಮೂಳೆ ಹಾಗೂ ಕೀಲು ಶಸ್ತ್ರಚಿಕಿತ್ಸಕರು
ನಿಮ್ಮ ದಾವಣಗೆರೆಗೆ ಭೇಟಿ ನೀಡುತ್ತಾರೆ

ಡಾ. ರವಿಕುಮಾರ್ ಮುಕಾರ್ತಿಹಾಳ್
D'Ortho, DNB (Ortho), Fellowship in Arthroplasty (Depuy, SPARSH India), Fellowship in Septic & Aseptic Revision Joint Replacement surgery (EndoKlinik, Germany)
ಮೂಳೆ ಮತ್ತು ಕೀಲು ಮರುಜೋಡಣಾ ಶಸ್ತ್ರಚಿಕಿತ್ಸಕರು

• ಕೀಲು ನೋವು • ಕೀಲು ಮರುಜೋಡಣೆ
• ಮೊಣಕಾಲು ನೋವು • ಹಿಪ್ ಮರುಜೋಡಣೆ
• ಭುಜದ ನೋವು • ರಿವಿಷನ್ ಶಸ್ತ್ರಚಿಕಿತ್ಸೆ
• ಸ್ಪೋರ್ಟ್ಸ್ ಇಂಜುರೀಸ್ • ಡಿಫಾರ್ಮಿಟಿ ಸರಿಪಡಿಸುವಿಕೆ
ಇತರೇ ಮೂಳೆ ಮತ್ತು ಕೀಲು ಸಮಸ್ಯೆಗೆ ಸಂಪರ್ಕಿಸಿ

ದಿನಾಂಕ: ಗುರುವಾರ, 25 ನವೆಂಬರ್ 2021 ಸಮಯ: ಬೆಳಿಗ್ಗೆ 11ರಿಂದ ಮಧ್ಯಾಹ್ನ 5ರವರೆಗೆ

ಹೊರ ರೋಗಿಗಳ ಕ್ಲಿನಿಕ್ ವಿಳಾಸ: ಎಸ್. ಎಸ್. ಸ್ಪೆಷಾಲಿಟಿ ಕ್ಲಿನಿಕ್,
ಮೋದಿ ಕಾಂಪೌಂಡ್, ಎಂ.ಸಿ.ಸಿ. 'ಎ' ಬ್ಲಾಕ್, ಮೋತಿ ವೀರಪ್ಪ ಕಾಲೇಜು ಹತ್ತಿರ, ದಾವಣಗೆರೆ
ನೋಂದಣಿಗಾಗಿ ಕರೆಮಾಡಿ: 96869 29090
ಸ್ಪರ್ಶ್ ಆಸ್ಪತ್ರೆ ಎಲ್ಲಾ ಆರೋಗ್ಯ ವಿಮಾ (TPA) ಯೋಜನೆಯಡಿಯಲ್ಲಿ ಅಂಗೀಕೃತವಾಗಿದೆ





## ಹೊನ್ನಾಳಿಗೆ ನಾಡಿದ್ದು ತರಳಬಾಳು ಶ್ರೀ



ಹೊನ್ನಾಳಿ, ನ. 21- ಇದೇ ದಿನಾಂಕ 24ರ ಬುಧವಾರ ಬೆಳಿಗ್ಗೆ 11 ಗಂಟೆಗೆ ನ್ಯಾಮತಿ ತಾಲ್ಲೂಕು ಚೀಲೂರು ಗ್ರಾಮಕ್ಕೆ ಸಿರಿಗೆರೆ ತರಳಬಾಳು ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಆಗಮಿಸುವುದಾಗಿ ಹೊನ್ನಾಳಿ ಶಿವ ಕ್ರೆಡಿಟ್ ಸೊಸೈಟಿ ಅಧ್ಯಕ್ಷ ಶ್ರೀಕಾಂತ್ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತ ನಾಡಿದ ಅವರು, ಸೊಸೈಟಿಯ 4ನೇ ಶಾಖೆಯಾಗಿರುವ ಚೀಲೂರು ಶಾಖೆಯ ಉದ್ಘಾಟನೆ ಯನ್ನು ಸ್ವಾಮೀಜಿ ನೆರವೇರಿಸು ವರು ಎಂದು ಹೇಳಿದರು.


## ಕ್ರಿಕೆಟ್ ಬೆಟ್ಟಿಂಗ್ ಇಬ್ಬರ ಬಂಧನ

ದಾವಣಗೆರೆ, ನ.21- ಕ್ರಿಕೆಟ್ ಬೆಟ್ಟಿಂಗ್ ಪ್ರಕರಣಕ್ಕೆ ಸಂಬಂಧಿಸಿದಂತೆ ಇಲ್ಲಿನ ಗ್ರಾಮಾಂತರ ಪೊಲೀಸರು ಇಬ್ಬರನ್ನು ಬಂಧಿಸಿ, 5 ಸಾವಿರ ನಗದು ವಶಪಡಿಸಿಕೊಂಡಿದ್ದಾರೆ.

ಹೆಚ್. ಕಲಪನಹಳ್ಳಿ ರಾಷ್ಟ್ರೀಯ ಹೆದ್ದಾರಿ-48 ರ ಸರ್ವಿಸ್ ರಸ್ತೆ ಬಳಿ ಜೂಜಾಟದ ವೇಳೆ ದಾಳಿ ನಡೆಸಲಾಗಿದೆ. ಬಂಧಿತನನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಪ್ರಕರಣದ ಮತ್ತೋರ್ವ ಆರೋಪಿಯನ್ನು ಬಂಧಿಸಿ, 3 ಮೊಬೈಲ್ ಫೋನ್‌ಗಳು ಹಾಗೂ ಇತರೆ ತಾಂತ್ರಿಕ ಪರಿಕರಗಳನ್ನು ವಶಪಡಿಸಿಕೊಳ್ಳಲಾಗಿದೆ.


ಏಳನೇ ವರ್ಷದ ಪುಣ್ಯಸ್ಮರಣೆ



ಲಿಂ|| ಶ್ರೀ ಮುದ್ದಳ್ಳಿ ಉಮೇಶ್‌ಚಂದ್ರಬಾಬು ಬಿ.ವಿ.

ನೀವು ನಮ್ಮನ್ನಗಲಿ ಇಂದಿಗೆ ಏಳು ವರ್ಷಗಳಾದವು.
ನಿಮ್ಮ ಸರಳತೆ ಮತ್ತು ನೀವು ಅನುಸರಿಸಿದ ಸನ್ಮಾರ್ಗವೇ ನಮಗೆ ಪ್ರೇರಣೆ,
ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುವೆವು.
ಸದಾ ನಿಮ್ಮ ಸ್ಮರಣೆಯಲ್ಲಿರುವ

ಧರ್ಮಪತ್ನಿ: ಶ್ರೀಮತಿ ಬಿ.ಯು. ಶಕುಂತಲಾ
ಮಕ್ಕಳಾದ: ಶ್ರೀ ಬಿ.ಯು. ಅನೂಪ್, ಶ್ರೀ ಬಿ.ಯು. ಸ್ವರೂಪ್
ಸೊಸೆಯಂದಿರಾದ: ಶ್ರೀಮತಿ ಬಿ.ಎ. ರಮ್ಯ ಮತ್ತು ಶ್ರೀಮತಿ ಬಿ.ಎಸ್. ಶ್ವೇತ
ಪ್ರೀತಿಯ ಮೊಮ್ಮಕ್ಕಳಾದ ಸಿರಿ, ರೋಹನ್, ಕರಣ್, ಅದ್ವಿಕ್ ಮತ್ತು ಬಂಧು-ಮಿತ್ರರು.
ಮುದ್ದಳ್ಳಿ ಟ್ರೇಡರ್ಸ್, ಮುದ್ದಳ್ಳಿ ಗಂಗಾ ಎಂಟರ್‌ಪ್ರೈಸಸ್
ಸಿಬ್ಬಂದಿ ವರ್ಗದವರು, ಬಿನ್ನಿ ಕಂಪನಿ ರಸ್ತೆ, ದಾವಣಗೆರೆ.
ಮುದ್ದಳ್ಳಿ ಉಮೇಶ್ ಎಂಟರ್‌ಪ್ರೈಸಸ್
ಆರ್.ಎಂ.ಸಿ. ಲಿಂಕ್ ರಸ್ತೆ, ದಾವಣಗೆರೆ



|| ಶ್ರೀ ಬೀರಲಿಂಗೇಶ್ವರ ಪ್ರಸನ್ನ || || ಶ್ರೀ ಹೊನ್ನಮ್ಮದೇವಿ ಪ್ರಸನ್ನ||

ಕೈಲಾಸ ಸಮಾರಾಧನೆ ಆಹ್ವಾನ ಪತ್ರಿಕೆ

ಶ್ರೀಮತಿ, ಶ್ರೀ ಡಾ|| ಹೊನ್ನಮೂರ್ತಿ ಜೆ.ಬಿ. ಹಾಗೂ ಸಹೋದರರು ಮತ್ತು ಕುಟುಂಬದವರು
ನಂ. 660/2, 8ನೇ ಮೇನ್, ಬ್ರಹ್ಮಾಕುಮಾರೀಸ್ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ.
ಇವರು ಮಾಡುವ ವಿಜ್ಞಾಪನೆಗಳು.

ದಿನಾಂಕ : 07-11-2021ನೇ
ಭಾನುವಾರ ಬೆಳಗ್ಗೆ 5-30ಕ್ಕೆ
ನಮ್ಮ ಪೂಜ್ಯ ತಂದೆಯವರಾದ
ಶ್ರೀ ಜೋಗಪ್ಪನವರ ಬಸಪ್ಪನವರು
(ಅಧ್ಯಕ್ಷರು, ಶ್ರೀ ಅಂಬಿಕಾ ವಿವಿಧೋದ್ದೇಶ ಸಹಕಾರ ಸಂಘ ನಿ., ದಾವಣಗೆರೆ)
ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
ಕೈಲಾಸ ಸಮಾರಾಧನೆಯನ್ನು
ದಿನಾಂಕ : 22-11-2021ರ ಸೋಮವಾರ
ಬೆಳಗ್ಗೆ 11-30 ಗಂಟೆಗೆ
ಶ್ರೀ ಷ.ಬ್ರ. ಡಾ|| ಸದ್ಯೋಜಾತ ಶಿವಾಚಾರ್ಯ ಮಹಾಸ್ವಾಮೀಜಿ ಹಿರೇಮಠ ಅಷ್ಟಾವರಣ ಮಂದಿರ,
ಎಂ.ಸಿ.ಸಿ. 'ಬಿ' ಬ್ಲಾಕ್, ಶಿವಾಚಾರ್ಯ ನಿಕೇತನ ಹಿರೇಮಠ, ದಾವಣಗೆರೆ-04, ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಈ ಕಾರ್ಯಕ್ರಮಕ್ಕೆ ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.



ಇಂತಿ ದುಃಖತಪ್ತರು : ಮಕ್ಕಳು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು, ಜೋಗಪ್ಪನವರ ವಂಶಸ್ಥರು ಹಾಗೂ ಬಂಧು-ಮಿತ್ರರು.
ಮೊ. : 94483 72247, 99023 77557, 90358 25959

ವಿ.ಸೂ. : ಆಹ್ವಾನ ಪತ್ರಿಕೆ ಕಳುಹಿಸಲಾಗಿದ್ದು, ತಲುಪದೇ ಇರುವವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಲು ವಿನಂತಿ.


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte